
ಆಂತರಿಕ ಪ್ರಸಾರಕ್ಕಾಗಿ ಮಾತ್ರ

ನವಂಬರ್ 2012 ಸಂಪುಟ 5 ಸಂಚಿಕೆ 6

ಶ್ರೀ ರಾಮಚಂದ್ರ ಮಿಷನ್®

India ECHOES

ONE WORLD ONE HUMANITY







# ಗುರುಗಳ ವರದಿ

ಆಗಸ್ಟ್ 15ರ ವಿಶೇಷವಾದ ಕಾರ್ಯಕಾರಿ ಸಮಿತಿ ಸಭೆಯು ಮುಗಿದ ನಂತರ ಗುರುಗಳು ಸ್ವಲ್ಪ ನಿರಾತಂಕವಾಗಿರುವಂತೆ ಕಾಣಿಸಿದರು. ಸದಾ ಇರುತ್ತಿದ್ದಂತೆ ಚುರುಕಾಗಿರುತ್ತಿದ್ದರು. 16ರ ಬೆಳಿಗ್ಗೆ ಅವರು ಕುಟೀರದಲ್ಲಿರುವ ಅಭ್ಯಾಸಿಗಳಿಗಳೆಲ್ಲರೂ ಸುವರ್ಣ ಪುಸ್ತಕದಲ್ಲಿ ಸಹಿ ಹಾಕಿದ್ದಾರೆಯೇ ಎಂದು ವಿಚಾರಿಸಿಕೊಂಡು, ಅದಕಾಗಿ ನೇಮಕಗೊಂಡಿರುವ ಸ್ವಯಂಸೇವಾ ಮುಖ್ಯಸ್ಥರನ್ನು ಕುಟೀರಕ್ಕೆ ಬರಮಾಡಿಕೊಂಡು ಎಲ್ಲರ ಹಸ್ತಾಕ್ಷರಗಳನ್ನು ಸಮರ್ಪಕವಾಗಿ ಪಡೆಯುವಂತೆ ವ್ಯವಸ್ಥೆ ಮಾಡಿದರು. ಇದಕ್ಕಾಗಿ ತಮ್ಮ ಸುತ್ತಲಿದ್ದ ಅಭ್ಯಾಸಿಗಳನ್ನು ಹಗುರಾಗಿ ಛೇಡಿಸಿದರು. ವಿಷಯ ಎಷ್ಟೇ ಚಿಕ್ಕದಾಗಿದ್ದರೂ ಕೂಡ, ಒಂದು ಪ್ರಕ್ರಿಯೆಯನ್ನು ಮುಗಿಸುವುದರಲ್ಲಿ ಅವರಿಗಿರುವ ಬದ್ಧತೆಯನ್ನು ಇದು ತೋರಿಸುತ್ತದೆ.

ಗುರುಗಳ ಆರೋಗ್ಯವು ಅಷ್ಟೊಂದು ಸಮಾಧಾನಕರವಾಗಿಲ್ಲದ ಕಾರಣ, ಸಾಮಾನ್ಯವಾದ ದಿನಚರಿಯೊಂದನ್ನು ಅವರು ಅನುಸರಿಸುತ್ತಿರುವರು. ಪ್ರತಿದಿನ ಬೆಳಗ್ಗೆ ಪರಿಶೀಲನೆಗಾಗಿ ಬರುವ ಫಿಸಿಯೋ ತೆರಪಿ ವೈದ್ಯರೊಡನೆ ತೊಡಗಿಕೊಳ್ಳುತ್ತಾರೆ. ಫಿಸಿಯೋಥೆರಪಿ ಆದ ನಂತರ ಸಾಮಾನ್ಯವಾಗಿ ಸ್ವಲ್ಪ ಕಾಲ ವಿರಮಿಸಿಕೊಳ್ಳುವರು. ಬೆಳಗಿನ ಲಘು ಉಪಾಹಾರ ಮತ್ತು ವಾರ್ತೆಗಳನ್ನು ಓದಿಸಿ ಕೇಳುವ ಹಾಗು ತಮ್ಮ ದಿನಚರಿಯನ್ನು ಮುಂದುವರೆಸಿಕೊಂಡು ಹೋಗುವ ಪ್ರಯತ್ನದಲ್ಲಿರುವರು. ನಂತರ ಅವರು ತಮಗೆ ಬಂದ ಪತ್ರಗಳನ್ನು ನೋಡಿ, ತಮ್ಮ ಕೆಲಸ ಮಾಡುತ್ತಾ ಕಾಲ ಕಳೆವರು. ಸಂಜೆ ಮತ್ತೊಮ್ಮೆ ಫಿಸಿಯೋಥೆರಪಿ ಕಾರ್ಯಕ್ರಮವಿರುತ್ತದೆ. ಕೆಲವೊಮ್ಮೆ ಸ್ವಲ್ಪ ದೂರ ಮೆಲ್ಲಗೆ ನಡೆದು, ನಂತರ ತಮ್ಮ ಗಾಲಿಕುರ್ಚಿಯಲ್ಲಿ ಕುಳಿತು ಒಂದು ಸುತ್ತು ತಿರುಗಾಡಿಕೊಂಡು ಬರುವರು ಇಲ್ಲವೇ ಅಭ್ಯಾಸಿಗಳೊಂದಿಗೆ ಹೊರಗಡೆ ಕುಳಿತುಕೊಳ್ಳುವರು. ಆರಂಭದಲ್ಲಿ ಅವರು ವಾಕರ್‌ನ ಸಹಾಯದಿಂದ ನಡೆದಾಡುತ್ತಿದ್ದರು. ಅದಾದ ನಂತರ ಈಗ ಕೋಲಿನ ಸಹಾಯದಿಂದ ಸ್ವಲ್ಪ ದೂರ ನಡೆಯಲು ಪ್ರಯತ್ನ ಪಡುತ್ತಿದ್ದಾರೆ. ಇವೆಲ್ಲವೂ ಗುರುಗಳು ನಿಧಾನವಾಗಿ ಆದರೆ ಕ್ರಮವಾಗಿ ಚೇತರಿಸಿಕೊಳ್ಳುತ್ತಿರುವುದನ್ನು ಸೂಚಿಸುತ್ತದೆ.

ಒಮ್ಮೆ ಗುರುಗಳು ಎಲ್ಲರೂ ಒಗ್ಗಟ್ಟಿನಿಂದ ಇರುವುದರ ಬಗ್ಗೆ ಒತ್ತು ಕೊಟ್ಟು ಹೇಳಿರುವ 'ಪಿಸುಮಾತುಗಳು ಸಂದೇಶ'ವೊಂದನ್ನು ಕೇಳಿದರು. ಗುರುಗಳು ಸಹಾ ನಾವೆಲ್ಲರೂ ಒಟ್ಟಿಗೆ ಒಗ್ಗಟ್ಟು ಹಾಗು ಸಾಮರಸ್ಯದಿಂದ ನಮ್ಮ ಸತ್ಸಂಗಗಳಲ್ಲಿ ಇರುವುದರ ಅಗತ್ಯದ ಬಗ್ಗೆ ಒತ್ತು ನೀಡಿ ಹೇಳುತ್ತಿರುವರು.

ಆಗಸ್ಟ್ 20 ಮತ್ತು 21 ರಂದು ಗುರುಗಳಿಗೆ ಒಂದು ವಿಶೇಷವಾದ ವೈದ್ಯಕೀಯ ತಪಾಸಣೆ ಮತ್ತು ಚಿಕಿತ್ಸೆಯನ್ನು ಮಾಡಲಾಯಿತು.ಮತ್ತು ಅದರ ಪರಿಣಾಮಗಳು ಸಕಾರಾತ್ಮಕವಾಗಿತ್ತು.


ಒಂದು ಮಧ್ಯಾಹ್ನ ಗುರುಗಳು ಆಕಸ್ಮಿಕವಾಗಿ ತಾವು ಹಲವು ವರ್ಷಗಳ ಹಿಂದೆ ನೋಡಿದ ಚಲನಚಿತ್ರವನ್ನು ನೆನಪಿಸಿಕೊಂಡರು. ಅದು ಯುರೋಪಿನ ಸಿನೆಮಾ ಹಾಲ್‌ನಲ್ಲಿ ನೋಡಿದ ಎರಡು ಸಿನಿಮಾಗಳಲ್ಲಿ ಒಂದಾಗಿತ್ತೆಂದು ಹೇಳಿದರು. ಇದನ್ನು ಅವರು ಪ್ಯಾರಿಸ್ಸಿನ ಸೊರ್ಬನ್ನೆ ವಿಶ್ವವಿದ್ಯಾನಿಲಯದಲ್ಲಿ ಸಹಜಮಾರ್ಗದ ಬಗ್ಗೆ ಪ್ರಸ್ತುತಿ ನೀಡಿದ ದಿನ ವೀಕ್ಷಿಸಿದ್ದರು.'ಮೊನಿಕಾ: ದ ಗರ್ಲ್ ಹೂ ಲಿವ್ಡ್ ಟ್ವೈಸ್' ಎಂಬ ಪುನರ್ಜನ್ಮ ಕುರಿತಾದ ಅ ಸಿನಿಮಾವನ್ನು ಇಂದು ಮತ್ತೊಮ್ಮೆ ಅತ್ಯಂತ ತನ್ಮಯತೆಯಿಂದ ವೀಕ್ಷಿಸಿದರು.

ಆಗಸ್ಟ್ 26 ರ ಭಾನುವಾರದಂದು ಸುಮಾರು 11 ಗಂಟೆಗೆ ಗುರುಗಳು 45 ನಿಮಿಷಗಳ ಕಾಲ ಆಶ್ರಮದಲ್ಲಿ ಸುತ್ತಾಡಿದರು. ಅವರು 'ನಾನು ಬಂಧನದಲ್ಲಿದ್ದಂತೆ ನನಗೆನಿಸುತ್ತಿತ್ತು ಮತ್ತು ಈಗ ನಾನು ಹೊರಬಂದಿದ್ದೇನೆ'ಎಂದರು. ಅವರು ಕ್ಯಾಂಟೀನ್, ಅಡುಗೆ ಮನೆ, ಗ್ರಂಥಾಲಯದ ತಳಮನೆಯಲ್ಲಿ ಅಂಗಸಾಧನೆಗಾಗಿ ತರಿಸಿಟ್ಟಿರುವ ಯಂತ್ರಗಳನ್ನು ನೋಡಿದರು. ಅಲ್ಲಿಂದ ಧ್ಯಾನ ಮಂದಿರಕ್ಕೆ ಹೋಗಿ ಅಲ್ಲಿ ನಡೆಯುತ್ತಿರುವ ಪುನರ್ನಿರ್ಮಾಣದ ಕೆಲಸದ ಪ್ರಗತಿಯ ಬಗ್ಗೆ ಸೋದರ ಜಾಕಿಯೊಡನೆ ಚರ್ಚೆ ನಡೆಸಿದರು. ಕುಟೀರದ ವರಾಂಡದಲ್ಲಿ ಕೆಲಕಾಲ ಸುಧಾರಿಸಿಕೊಂಡು ನಂತರ ಸುಮಾರು ನಾಲ್ಕು ತಿಂಗಳುಗಳಿಂದಲೂ ಊಟ ಮಾಡಿರದ ತಮ್ಮ ಊಟದ ಮನೆಯಲ್ಲಿ ಕುಳಿತು ತಮ್ಮ ಮಧ್ಯಾಹ್ನದ ಭೋಜನವನ್ನು ಮಾಡುವುದಾಗಿ ನಿರ್ಧರಿಸಿದರು.

ಒಂದು ದಿನ ಫಿಸಿಯೋಥೆರಪಿ ಚಿಕಿತ್ಸೆ ಮುಗಿದ ನಂತರ ಅವರು ವೈದ್ಯರೊಡನೆ ಭಾಷೆಗಳ ಬಗ್ಗೆ ಮಾತನಾಡುತ್ತ "ನಾನಿದನ್ನು ಈ ಮೊದಲೇ ಹೇಳಿದ್ದೆ. ಓರ್ವ ವ್ಯಕ್ತಿಯ ಹೃದಯವನ್ನು ಪ್ರವೇಶಿಸುವುದು ಅವನ ಹೊಟ್ಟೆಯ ಮೂಲಕ ಅಲ್ಲ. ಅದು ಅವನ ಭಾಷೆಯ ಮೂಲಕ" ಎಂದು ಹೇಳಿ, ಅವನಾಡುವ ಭಾಷೆಯ ಕೆಲವು ಪದಗಳನ್ನಾದರೂ ನಾವು ಬಳಸಿದರೆ ಅದು ಅವನ ಹೃದಯವನ್ನು ಮುಟ್ಟುತ್ತದೆ ಎಂದರು. ಹೀಗೆ ಹೇಳುತ್ತಾ, ಅರಬ್ಬಿ ಭಾಷೆಯ ಕೆಲವು ವಾಕ್ಯಗಳನ್ನು ಮಾತನಾಡಿ ನಮ್ಮೆಲ್ಲರನ್ನು ಚಕಿತಗೊಳಿಸಿದರು. ಫಿಸಿಯೋಥೆರಪಿಯಾದ ನಂತರ ಅವರು ನಿಜವಾಗಿಯೂ ಬಹಳ ಸುಸ್ತಾಗಿದ್ದರು. "ಈಗ ನಿಮ್ಮಲ್ಲಿ ಯಾರಾದರು ಒಬ್ಬರು ನನಗೆ ಕೇವಲ ಕೆಲವೇ ಹೆಜ್ಜೆಗಳನ್ನು ಮುಂದಿಡಿ ಎಂದು ಹೇಳಿದ ಪಕ್ಷದಲ್ಲಿ ನಾನು ವಿಶ್ರಾಂತನಾಗಬೇಕಾಗುತ್ತದೆ"ಎಂದರು.







ಆಗಸ್ಟ್ 29ರ ಬುಧವಾರ ಗುರುಗಳಿಗೆ 24 ಗಂಟೆಗಳ ಕಾಲ ಅವರ ಹೃದಯದ ಕಾರ್ಯಗತಿಯನ್ನು ಎಚ್ಚರಿಕೆಯಿಂದ ತೋರಿಸುವ ಸಾಧನವೊಂದನ್ನು ಎದೆಯ ಮೇಲೆ ಇಡಲಾಗಿತ್ತು. ಅವರು ತಮ್ಮ ನಿತ್ಯದ ದಿನಚರಿಯನ್ನು ಯಥಾವತ್ತಾಗಿ ನಡೆಸಿಕೊಂಡಿರಬೇಕೆಂದು ಸೂಚಿಸಲಾಗಿತ್ತು. ಆದ್ದರಿಂದ ಅವರು ಸಂಜೆ ತಮ್ಮ ಗಾಲಿಕುರ್ಚಿಯಲ್ಲಿ ಕುಳಿತು ತಿರುಗಾಡಲು ನಿರ್ಧರಿಸಿದರು. ಆದರೆ ಸ್ವಲ್ಪ ತುಂತುರು ಮಳೆ ಆರಂಭವಾದ ಕಾರಣ ಅವರು ಹಿಂದಿರುಗಿ ಬಂದು ವರಂಡಾದಲ್ಲಿ ಕುಳಿತರು. ಗುರುಗಳು ವಾಮನಾವತಾರ ಮತ್ತು ಶುಕ್ರಾಚಾರ್ಯರು ಹೇಗೆ ತಮ್ಮ ಕಣ್ಣನ್ನು ಕಳೆದುಕೊಂಡರೆಂಬ ಸಂಗತಿಯನ್ನು ಹೇಳಿ – ನನ್ನ ಮುಂದೆ ಕುಳಿತಿರುವ ಗಣಕತಜ್ಞರಿಗೆ ಆ ಕತೆಗಳ ಬಗ್ಗೆ ಏನೂ ತಿಳಿಯದು ಎಂದು ಲೇವಡಿ ಮಾಡಿದರು.

ಸೋದರಿ ಆಲಾ ಮತ್ತು ಸೋದರ ಈಗೊರ್‌ರವರು "ದಿ ಗೋಲ್ಡನ್ ಸೈಲೆನ್ಸ್ ಆಫ್ ಸತ್ಖೋಲ್" ಎಂಬ ಸತ್ಖೋಲ್ ಆಶ್ರಮದ ಮೇಲಿನ ಕಿರುಚಿತ್ರದ ಡಿವಿಡಿಯನ್ನು ಗುರುಗಳಿಗೆ ಕೊಟ್ಟರು. ಅವರು ಅದನ್ನು ನೋಡುವ ಇಚ್ಛೆ ವ್ಯಕ್ತಪಡಿಸಿ, ಆಸಕ್ತಿಯಿಂದ ಅದನ್ನು ನೋಡಲಾರಂಭಿಸಿದಾಗ ಇಲ್ಲಿನ ವಾತಾವರಣವು ಸಂಪೂರ್ಣವಾಗಿ ಬದಲಾಗಿ, ಪ್ರತಿಯೊಬ್ಬರೂ ಸತ್ಖೋಲ್‌ಗೆ ತೆರಳಿದಂತೆ ಭಾಸವಾಯಿತು.

ಮಂಗಳವಾರ ಸೆಪ್ಟೆಂಬರ್ 11ರಂದು 'ಗಾಯಿತ್ರಿ'ಯ ಕಟ್ಟಡ ನಿರ್ಮಾಣ ಆರಂಭಗೊಂಡು 50 ವರ್ಷಗಳಾಗಿದೆ ಎಂದು ಒಂದು ಸಮಾರಂಭವನ್ನು ಆಚರಿಸುವ ಯೋಜನೆ ಇದೆ ಎಂದು ಗುರುಗಳು ಹೇಳಿದರು. ಆದರೆ ಅದು ಅವರ ಅನಾರೋಗ್ಯದ ಕಾರಣ ನಡೆಯಲಿಲ್ಲ. ಒಮ್ಮೆ ಹಾಗೆ ಮಾತನಾಡುತ್ತಿರುವಾಗ ಗುರುಗಳು ಹೆಂಡತಿಯಲ್ಲಿರಬೇಕಾದ ಲಕ್ಷಣಗಳೇನೆಂದರೆ, ಅವಳು ಪ್ರೇಮಮಯಿಯಾಗಿರಬೇಕು, ಅವಳು ಅಡುಗೆ ಮಾಡಲು ಕಲಿತಿರಬೇಕು, ಅವಳು ಮಕ್ಕಳನ್ನು ಚೆನ್ನಾಗಿ ನೋಡಿಕೊಳ್ಳುವ ಸಾಮರ್ಥ್ಯ ಹೊಂದಿರಬೇಕು ಎಂದರು. ಆದರೆ ಈಚಿನ ದಿನಗಳಲ್ಲಿ ನಮಗೆ ಸೌಂದರ್ಯವುಳ್ಳ ಹೆಂಡತಿಯರು ಬೇಕು, ಇವೇ ಮುಂತಾದ ವಿಚಾರಗಳಿರುತ್ತವೆ ಮತ್ತು ಇತರರು ಅವಳನ್ನು ನೋಡಿದಾಗ ಅಸೂಯೆಗೆ ಒಳಗಾಗುತ್ತೇವೆ ಎಂದರು.

ಅಭ್ಯಾಸಿಯೊಬ್ಬರು ಗುರುಗಳನ್ನು, ನೀವು ಅಭ್ಯಾಸಿಗಳನ್ನು ಭೇಟಿಯಾಗುವುದು ಮತ್ತು ನಿಮ್ಮ ವಿಶ್ರಾಂತಿಯ ಅಗತ್ಯ ಇವೆರಡನ್ನೂ ಹೇಗೆ ಸರಿದೂಗಿಸಿಕೊಂಡು ಹೋಗುವಿರಿ ಎಂದು ಕೇಳಿದಾಗ, ಗುರುಗಳು–"ನಾನು ನನ್ನ ಕೆಲಸವನ್ನು ಪ್ರೀತಿಸುತ್ತೇನೆ. ಪ್ರೇಮ ಎಲ್ಲಿದೆಯೋ ಅಲ್ಲಿ ಪರಿಮಿತಿ ಇರುವುದಿಲ್ಲ". ಎಂದರು. ನಂತರ ಗುರುಗಳು ಕಾನ್ಹ ಯೋಜನೆಯ ಗುಂಪಿನೊಡನೆ ವಾರ್ತಾಲಾಪ ನಡೆಸಿ, ಅವರಿಗೆ ಹಲವಾರು ಸಲಹೆಗಳನ್ನು ನೀಡಿದರು. ಆ ಕಾನ್ಹ ಸ್ಥಳವನ್ನು ಮುಂಬರುವ ಏಪ್ರಿಲ್ 30, 2013ರ ಉತ್ಸವಕ್ಕಾಗಿ ತಯಾರು ಮಾಡಬೇಕಾಗಿದೆ. ಆಗಸ್ಟ್ 29ರಂದು ಗುರುಗಳಿಗೆ 24 ಗಂಟೆಗಳ ಕಾಲ ಅವರ ಹೃದಯದ ಕಾರ್ಯಗತಿಯನ್ನು ಅವಲೋಕನ ಮಾಡುವ ಸಾಧನವನ್ನು ಇಡಲಾಗಿತ್ತು.

ನಂತರ ಗುರುಗಳು ಧ್ಯಾನ ಮಂದಿರದ ಕೆಲಸಕಾರ್ಯಗಳು ಹೇಗೆ ನಡೆಯುತ್ತಿವೆ ಎಂಬುದನ್ನು ತನಿಖೆ ಮಾಡಲು ಹೋಗಿದ್ದರು. ಹಿಂದಿರುಗಿ ಬರುವಾಗ ಡಾರ್ಮ್ ಎ ಬಳಿ ಕೆಲಕಾಲ ತಡೆದು ಸೋದರ ರಾಘವನ್‌ರವರು ವಿಶಾಖಪಟ್ಟಣದ ಅಭ್ಯಾಸಿಗಳಿಗೆ ನೀಡುತ್ತಿದ್ದ ಭಾಷಣವನ್ನು ಆಲಿಸಿದರು. ನಂತರ ಅಲ್ಲಿದ್ದವರಿಗೆ 15 ನಿಮಿಷಗಳ ಕಾಲ ಒಂದು ಕಿರು ಬೈಠಕ್ ಕೊಟ್ಟು ಕುಟೀರಕ್ಕೆ ಹಿಂತಿರುಗಿದರು.

ಕುಟೀರದ ಕಟ್ಟಡದ ಕಾರ್ಯ ಸುಗಮವಾಗಿ ಸಾಗಲಿ ಎಂದು ಗುರುಗಳು ಸೊ.ಮಾಧವ ರೆಡ್ಡಿಯವರ ಮನೆಯಲ್ಲಿ ವಾಸಿಸುವುದಾಗಿ ನಿರ್ಧರಿಸಿದರು. ಅವರು ಸೊ.ಮಾಧವ ರೆಡ್ಡಿಯವರ ಮನೆಯಲ್ಲಿ ವಾಸಿಸಲು ನಿರ್ಧರಿಸಿದ್ದು ಮುಖ್ಯವಾಗಿ ವಿಶ್ರಾಂತಿ ಮತ್ತು ಚೇತರಿಕೆಗಾಗಿ. ಆದರೆ ಅಲ್ಲಿಯೂ ಸಹ ನಿರಂತರವಾಗಿ ಅಭ್ಯಾಸಿಗಳ ಪ್ರವಾಹ ಅವರನ್ನು ಭೇಟಿಯಾಗಲು ಬರುತ್ತಿತ್ತು. ಗುರುಗಳು ತಮ್ಮ ಶಕ್ತಿ ಮೀರಿ ಅಭ್ಯಾಸಿಗಳನ್ನು ಬರಮಾಡಿಕೊಳ್ಳಲು ಶ್ರಮಿಸುತ್ತಿರುವರು. ಆದರೆ ಅಭ್ಯಾಸಿಗಳೂ ಸಹ ಅವರಿಗಿರುವ ವಿಶ್ರಾಮದ ಅವಶ್ಯಕತೆಯ ಅಂಶವನ್ನು ಅರಿತುಕೊಂಡರೆ ಅವರಿಗೆ ಚೇತರಿಸಿಕೊಳ್ಳಲು ಸಾಧ್ಯವಾಗುತ್ತದೆ.

ಒಂದು ಸಂಜೆ ಗುರುಗಳು ತಮ್ಮ ಮಲಗುವ ಕೊಠಡಿಯಿಂದ ಕೋಲೂರುತ್ತಾ ಬಂದುದನ್ನು ನೋಡಿದಾಗ ಅದು ಅವರು ಸುಧಾರಿಸಿಕೊಂಡು ಚೇತರಿಕೊಳ್ಳುತ್ತಿರುವುದು ಗಮನಿಸಬಹುದಾಗಿತ್ತು. ಗುರುಗಳು ಹೊರಗಡೆ ಬಂದು ಸ್ವಲ್ಪ ಕಾಲ ಅಲ್ಲೇ ಕುಳಿತಿದ್ದರು ನಂತರ ತಾವೇ ತಮ್ಮ ಗಾಲಿಕುರ್ಚಿಯನ್ನು ತಳ್ಳಿಕೊಂಡು ಒಳಗಡೆ ಹೋದರು. ಅವರು ಉತ್ತಮ ಮನಸ್ಥಿತಿಯಲ್ಲಿದ್ದು, ನೋವು ಮತ್ತು ಕಷ್ಟಕಾರ್ಪಣ್ಯಗಳ ಬಗೆಗೆ ಮಾತನಾಡಿದರು. ಅವುಗಳು ನಮ್ಮ ಬೆಳವಣಿಗೆಗೆ ಮತ್ತು ವಿಕಾಸಕ್ಕೆ ಬಹಳ ಒಳ್ಳೆಯದು ಆದಕಾರಣ ನಾವದನ್ನು ಸಂತೋಷಚಿತ್ತದಿಂದ ಸ್ವೀಕರಿಸಬೇಕೆಂದು ಹೇಳಿದರು. ಮುಂದೆ ಬರಬಹುದಾದ ಕಷ್ಟದ ಪರಿಸ್ಥಿತಿಯನ್ನು











ಎದುರಿಸಿ ಅದನ್ನು ಜಯಿಸುವುದಕ್ಕಾಗಿ ಮಾತ್ರ ನಾನೀಗ ಕೋಲೂರಿಕೊಂಡು ನಡೆಯುತ್ತಿರುವೆ ಎಂದರು.

ಶನಿವಾರ ಸೆಪ್ಟಂಬರ್ 22ರಂದು ಬೆಳಗ್ಗೆ ಗುರುಗಳ ಹಲ್ಲುಗಳ ತಪಾಸಣೆ ನಡೆಯಿತು. ಸುಮಾರು 11.30 ಕ್ಕೆ ಅವರು ಡಾರ್ಮ್ ಎ ಗೆ ಹೋಗಿ ಅಲ್ಲಿ ಆಂಧ್ರಪ್ರದೇಶದ ಕರಾವಳಿ ತೀರದ ಅಭ್ಯಾಸಿಗಳನ್ನು ಭೇಟಿ ಮಾಡಿ, ಒಂದು ಕಿರು ಭಾಷಣ ನೀಡಿ, ಕಾಲಹರಣ ಮಾಡದಿರುವುದರ ಪ್ರಾಮುಖ್ಯತೆಯ ಬಗ್ಗೆ ಹೇಳಿದರು. ತದನಂತರ ಒಂದು ಕಿರು ಬೈಠಕ್ ಸಹ ನೀಡಿದರು. ಅವರು ಭಾಷಣದಲ್ಲಿ ನಮಗಿರುವ ಸಮಯದ ಸದುಪಯೋಗ ಮಾಡಿಕೊಂಡು ಪ್ರಗತಿಹೊಂದುವುದರ ತೀವ್ರತೆಯ ಬಗ್ಗೆ ತಿಳಿಸಿ ಹೇಳಿದರು. ಕಳೆದ ಹೋದ ಕಾಲ ಮರಳಿ ಪಡೆಯುವುದು ಅಸಾಧ್ಯ ಎಂಬುದನ್ನು ನೆನೆಪಿನಲ್ಲಿಡಿ ಎಂದು ಪ್ರತಿಯೊಬ್ಬರನ್ನೂ ಪ್ರೇರೇಪಿಸಿದರು.

ಕೆಲವೊಮ್ಮೆ ಗುರುಗಳು ಹಜಾರದವರೆಗೂ ಬರುತ್ತಿದ್ದರು. ತಮ್ಮ ಊರುಗೋಲಿನ ಸಹಾಯದಿಂದಲೋ ಅಥವಾ ಸನಿಹದ ಅಭ್ಯಾಸಿಗಳ ನೆರವಿನಿಂದಲೋ ನಡೆಯುತ್ತಿದ್ದರು. ಅಂಥಹ ಒಂದು ಸಂದರ್ಭದಲ್ಲಿ ಬಹಳಷ್ಟು ಜನ ಅಭ್ಯಾಸಿಗಳು ಅವರ ಬಳಿ ಬಂದು ಕುಳಿತರು. ಗುರುಗಳು ಬಹಳ ಆಯಾಸಗೊಂಡಿದ್ದು ನಿತ್ರಾಣರಾಗಿ ಕಂಡರೂ ಯಾರಿಗೂ ಹೇಳದೆ ಬೈಠಕ್ ನೀಡಲು ಶುರು ಮಾಡಿದ 15 ನಿಮಿಷಗಳ ನಂತರ ಅವರು ಸಾಕು ಎಂದರು. ಟರ್ಕಿ ದೇಶದಿಂದ ಬಂದಿದ್ದ ದಂಪತಿಗಳು ಟರ್ಕಿಯಲ್ಲಿ ಮಿಷನ್ನಿನ ಬಗ್ಗೆ ಒಳ್ಳೆಯ ಸುದ್ದಿ ತಂದಿದ್ದು ಗುರುಗಳಿಗೆ ಸಂತಸ ನೀಡಿತು.

ಮತ್ತೊಂದು ದಿನ ಗುರುಗಳು ಸೊ.ಮಾಧವರ ಮನೆಯಲ್ಲಿ ಬೈಠಕನ್ನು, ಬೆಳಗಿನ ಸತ್ಸಂಗ ಆಶ್ರಮದಲ್ಲಿ ನಡೆಯುತ್ತಿದ್ದ ಸಮಯದಲ್ಲೇ ನೀಡಿದರು. ನಂತರ ಸೊ.ಕಮಲೇಶರು ಗುರುಗಳೊಂದಿಗೆ ಸತ್ಸಂಗದ ಮಧ್ಯದಲ್ಲಿ ಭಿನ್ನ ಬಗೆಯ ಲೀನತೆಯುಂಟಾಯಿತು ಎನ್ನಲು, ಗುರುಗಳು ತಾವು ಸತ್ಸಂಗದಲ್ಲಿ ಎಲ್ಲರನ್ನೂ ಒಳಪಡಿಸಿದ್ದರಿಂದ ಈ ಬಗೆಯ ಪರಿಣಾಮ ಆಯಿತು ಎಂದರು.




ಶುಕ್ರವಾರ ಸೆಪ್ಟೆಂಬರ್ 28 ಸೊ.ಕಮಲೇಶರ ಹುಟ್ಟುಹಬ್ಬದ ದಿನವಾಗಿದ್ದು, ಗುರುಗಳು ಬೆಳಗ್ಗೆ ಪ್ರಸಾದ ಅರ್ಪಿಸಿ ನಂತರ ಎಲ್ಲರಿಗೂ ಹಂಚಿದರು. ಸಂಜೆ ಕೊಲ್ಕತ್ತಾದಿಂದ ಬಂದ ಅಭ್ಯಾಸಿಗಳು ಗುರುಗಳನ್ನು ಕಾಣಲು ಸೊ.ಮಾಧವರ ಮನೆಯಲ್ಲಿ ಹೊರಗೆ ಬಂದು ಸೇರಿದ್ದರು. ಗುರುಗಳು ಹೊರಗೆ ಬಂದು ಕೆಲ ನಿಮಿಷಗಳಷ್ಟು ಕುಳಿತಿದ್ದರು. ಅಲ್ಲಿ ನೆರೆದಿದ್ದ ಅಭ್ಯಾಸಿಗಳೆಲ್ಲರಿಗೂ ಗುರುಗಳನ್ನು ಭೇಟಿಯಾದ ಧನ್ಯತೆಯ ಭಾವ ಬಂದಿತು.

ಚೀನಾ ಕಾರ್ಯಾಗಾರ ಪ್ರಾರಂಭವಾಗುವ ಮೊದಲು ಅದರ ವ್ಯವಸ್ಥಾಪಕರು ಗುರುಗಳೊಂದಿಗೆ ಆ ವಾರದ ಕಾರ್ಯಾಗಾರದ ವಿವರಗಳನ್ನು ಕುರಿತು ಚರ್ಚಿಸಿದ್ದರು. ಇದರಲ್ಲಿ ಚೀನಾ ಮತ್ತು ಪೌರ್ವಾತ್ಯ ದೇಶಗಳ ಎಪ್ಪತ್ತು ಅಭ್ಯಾಸಿಗಳು ಭಾಗವಹಿಸಿದ್ದರು. ಅಕ್ಟೋಬರ್ 22ರಂದು ಗುರುಗಳು ಡಾರ್ಮ್ ಎ ಯಲ್ಲಿ ಚೀನಾದ ಅಭ್ಯಾಸಿಗಳ ಈ ಕಾರ್ಯಾಗಾರದಲ್ಲಿ ಭಾಗವಹಿಸಿ ಒಂದು ಬೈಠಕ್ ಮತ್ತು ಭಾಷಣ ನೀಡಿದರು.

ಅವರು ಮಾತನಾಡುತ್ತ "ನಾನು ನನ್ನ ಕಾಲೇಜಿನ ವಿದ್ಯಾರ್ಥಿ ಜೀವನದ ಕಾಲದಿಂದಲೂ ಚೀನಾದ ಸಂಸ್ಕೃತಿ ಮತ್ತು ತತ್ವಶಾಸ್ತ್ರಗಳಿಂದ ಆಕರ್ಷಿತನಾಗಿದ್ದೆ ಹಾಗು ತಾವೊ ಲಿ ಚಿಂಗ್ ಮತ್ತು ಕನ್‌ಫ್ಯೂಶಿಯಸ್‌ನ ಅನಲೆಕ್ಟ್ಸ್ ಪುಸ್ತಕಗಳನ್ನು ಓದಲು ಸಾಧ್ಯವಾಗಿದ್ದು, ನನ್ನನ್ನು 'ಐ ಚಿಂಗ್– ಬದಲಾವಣೆಗಳ ಪುಸ್ತಕ' ಬಹಳ ಆಕರ್ಷಿಸಿತ್ತು ಎಂದರು. ಅವರು ಚೀನಾ ದೇಶಕ್ಕೆ ಮತ್ತೊಮ್ಮೆ ಭೇಟಿ ನೀಡಲು ತಮಗಿರುವ ಆಸಕ್ತಿಯ ಬಗ್ಗೆ ಹೇಳುತ್ತ 'ನಾನು ಚೀನಾದ ಒಂದೋ ಎರಡೋ ಪ್ರದೇಶಗಳಿಗೆ ಭೇಟಿ ನೀಡಿದ್ದೇನೆ, ನನ್ನ ಗುರುಗಳು ಅನುಮತಿಯಿತ್ತರೆ ಮತ್ತೆ ಭೇಟಿ ನೀಡುತ್ತೇನೆ, ಆದರೆ ಅದು ಬಹಳ ದೂರದಲ್ಲಿದೆ. ಅದರೆ ನಾನು ಕೊಲ್ಕತ್ತಾಕ್ಕೆ ವಿಶ್ರಾಂತಿಗಾಗಿ ಕೆಲ ದಿನ ಹೋಗುವವನಿದ್ದು ಅಲ್ಲಿಂದ ಕುನ್ಮಿಂಗ್‌ಗೂಹೋಗುತ್ತೇನೆ ಎಂದರು. ಗುರುಗಳು ಭಾರತ ಮತ್ತು ಚೀನಾ ಜನರಲ್ಲಿ ಪ್ರಾಚೀನ ಸಂಸ್ಕೃತಿ, ತತ್ತ್ವ, ಐತಿಹಾಸಿಕ ಘಟನೆ ಮುಂತಾದವುಗಳಲ್ಲಿ ಬಹಳಷ್ಟು ವಿನಿಮಯವಿದೆ ಎಂದರು. ಅವರು' ನೀವು ಮತ್ತೆ ಮತ್ತೆ ಈ ಚೀನಿ ಭಾಷೆ ಬರದ ವೃದ್ಧನನ್ನು ನೋಡಲು ಬರುತ್ತಿರಿ, ಆದರೂ ನಿಮ್ಮೆಲ್ಲರನ್ನು ಭೇಟಿಯಾಗಿ ಕೆಲ ಮಾತುಗಳನ್ನು ಹಂಚಿಕೊಳ್ಳಲು ಸಾಧ್ಯವಾಗಿಸಿದ್ದಕ್ಕೆ ನನ್ನ ಗುರುಗಳಿಗೆ ಧನ್ಯವಾದಗಳು. ಮತ್ತೆ 2013ರ ಕಾರ್ಯಾಗಾರದಲ್ಲಿ ಭೇಟಿಯಾಗೋಣ ಎಂದರು.

ಒಂದು ಸಂಜೆ ರಶ್ಯಾದ ಇಬ್ಬರು ಸಹೋದರಿಯರು ತಾವು ಹೊರಡುತ್ತಿರುವುದಾಗಿಯೂ, ಗುರುಗಳು ಏನಾದರೂ ಸಂದೇಶವನ್ನು ನೀಡಬೇಕೆಂದು ಕೇಳಿಕೊಂಡರು. ಗುರುಗಳು "ಪ್ರಪಂಚವನ್ನು ಬದಲಾಯಿಸುವುದು ನಮ್ಮ ಕೆಲಸವಲ್ಲ, ಅದು ದೈವೀ ಕೆಲಸ, ಆದರೆ ನಾವು ಒಬ್ಬ, ಮತ್ತೊಬ್ಬ,ಮಗದೊಬ್ಬ ಹೀಗೆ ಕರೆತರುವ ಮೂಲಕ ಸಹಾಯಮಾಡ ಬಲ್ಲೆವು, ಶುದ್ಧ ಹೃದಯ, ಪ್ರೀತಿಸುವ ಹೃದಯ ನಿಧಾನವಾಗಿ ಎಲ್ಲವನ್ನೂ ಬದಲಾಯಿಸಬಲ್ಲುದು. ನೀವು ಕೊಳದೊಳಗೆ ಕಲ್ಲನ್ನು ಹಾಕಿದರೆ ತರಂಗಗಳು ಹಾಗೆಯೇ ಏಳುವುವು. ನಾವು ನಮ್ಮ ಕೆಲಸ ಚಿಕ್ಕದು ಅಥವಾ ದೊಡ್ಡದು ಎಂದು ಚಿಂತಿಸಬಾರದು. ನಾವು ಸುಮ್ಮನೆ ಮಾಡುವೆವು. ನಾನು ಬಾಬೂಜಿ ಮಹಾರಾಜರನ್ನು ಬಹಳಷ್ಟು ಬಾರಿ ಕೇಳುತ್ತಿದ್ದೆ– ಬಾಬೂಜಿ, ನಾವು ಇಷ್ಟೊಂದು ಕೆಲಸ ಮಾಡುತ್ತಿದ್ದೇವೆ ಇದರ ಪರಿಣಾಮ ಹೇಗಿರಬಹುದು? ಎಂದು. ಬಾಬೂಜಿ ಹೇಳುತ್ತಿದ್ದರು, ಈ ಪ್ರಶ್ನೆ ಮತ್ತೆ ಕೇಳಬೇಡ. ಹಾಗಾಗಿ ನಾವು ಫಲಿತಾಂಶಗಳ ಬಗ್ಗೆ ಚಿಂತಿಸುವುದಿಲ್ಲ. ಸುಮ್ಮನೆ ಮಾಡು, ಶ್ರದ್ಧೆಯಿಡು, ಫಲಿತಾಂಶ ಬರುತ್ತದೆ"

# ಮಣಪಾಕ್ಕಂನಲ್ಲಿ ಸಮ್ಮೇಳನಗಳು






## ಸೆಪ್ಟಂಬರ್ 4ರಿಂದ 9, 2012

ಅಲಹಾಬಾದ್ ಕೇಂದ್ರದಿಂದ 630 ಜನ ಅಭ್ಯಾಸಿಗಳು ಈ ಸಮ್ಮೇಳನದಲ್ಲಿ ಪಾಲ್ಗೊಳ್ಳಲು ಬಂದಿದ್ದರು. ನಿಯಮಿತ ಕಾರ್ಯಕ್ರಮಗಳು ಸತ್ಸಂಗಗಳು ಮತ್ತು ಸಭೆಗಳ ಹೊರತಾಗಿ, ಅಭ್ಯಾಸಿಗಳಿಗೆ ಗುರುಗಳನ್ನು ಹಲವಾರು ಬಾರಿ ಭೇಟಿಯಾಗುವ ಅವಕಾಶ ಲಭಿಸಿತ್ತು. ಎಲ್ಲಾ ಅಭ್ಯಾಸಿಗಳು ಶಿಸ್ತಿನಿಂದ ಗುರುಗಳ ಕುಟೀರದ ಹೊರಗೆ ಬಂದು ಸೇರಿರುತ್ತಿದ್ದರು, ಗುರುಗಳು ಸಂಜೆಯ ಸಮಯದಲ್ಲಿ ತಮ್ಮ ಗಾಲಿ ಕುರ್ಚಿಯಲ್ಲಿ ಕುಳಿತು ಹೊರಬಂದು ಅಭ್ಯಾಸಿಗಳನ್ನು ಕಾಣುತ್ತಿದ್ದರು. ಸಂಪೂರ್ಣ ಮೌನವಿರುತ್ತಿದ್ದ ಸನ್ನಿವೇಶದಲ್ಲಿ ಗುರುಗಳು ಅಭ್ಯಾಸಿಗಳೊಡನೆ 10–15 ನಿಮಿಷ ಕುಳಿತಿರುತ್ತಿದ್ದರು.

## ಸೆಪ್ಟಂಬರ್ 11 ರಿಂದ 16, 2012

ವಿಶಾಖಪಟ್ಟಣ ಮತ್ತು ದಾಚೆಪಲ್ಲಿ ಕೇಂದ್ರಗಳಿಂದ 530 ಜನ ಅಭ್ಯಾಸಿಗಳು ಈ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಗುರುಗಳು ಡಾರ್ಮ್ ಎ ಗೆ ಒಮ್ಮೆ ಭೇಟಿ ನೀಡಿ ಒಂದು ಕಿರು ಭಾಷಣ ಮತ್ತು ಒಂದು ಬೈಠಕ್ ನೀಡಿದರು.

## ಸೆಪ್ಟಂಬರ್ 18 ರಿಂದ 23, 2012

ಈ ಸಮ್ಮೇಳನಕ್ಕೆ ಆಂಧ್ರದ ಕರಾವಳಿ ಮತ್ತು ಪಶ್ಚಿಮ ಗೋದಾವರಿ, ಪೂರ್ವ ಗೋದಾವರಿ ಮತ್ತು ಕಾಕಿನಾಡ ಕೇಂದ್ರಗಳ 430 ಅಭ್ಯಾಸಿಗಳು ಭಾಗವಹಿಸಿದ್ದರು. ಗುರುಗಳು ಈ ಅಭ್ಯಾಸಿಗಳೆಲ್ಲರನ್ನೂ 22ರಂದು ಭೇಟಿಯಾಗಿ ಬೈಠಕ್ ಹಾಗೂ ಭಾಷಣ ನೀಡಿದರು. ದಿನವಹಿ ಸತ್ಸಂಗದ ಜತೆಗೆ ಭಾಷಣಗಳೂ ಇರುತ್ತಿದ್ದು ಅಭ್ಯಾಸಿಗಳು ಎಲ್ಲಾ ಕಾರ್ಯಕ್ರಮಗಳಿಗೂ ಭಾಗವಹಿಸಿದ್ದರು.

## ಸೆಪ್ಟಂಬರ್ 25 ರಿಂದ 30, 2012

ಕೊಲ್ಕತ್ತಾ ಮತ್ತು ಪಶ್ಚಿಮ ಬಂಗಾಳ, ಹಾಗೆಯೇ ಸಿಕ್ಕಿಮ್ ಮತ್ತು ತ್ರಿಪುರ ಕೇಂದ್ರಗಳ ಅಭ್ಯಾಸಿಗಳು ಈ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಸೊ.ಕಮಲೇಶರು ಉಳಿದೆಲ್ಲಾ ಸಮ್ಮೇಳನಗಳಂತೆ ಇದರಲ್ಲೂ ಸಕ್ರಿಯವಾಗಿ ಪಾಲ್ಗೊಂಡಿದ್ದರು. ಅವರ ಎಲ್ಲಾ ಭಾಷಣಗಳಲ್ಲೂ ಪ್ರಮುಖ ವಿಷಯವು ಗುರುಗಳ ಭೌತಿಕ ಸಾಮೀಪ್ಯ ಪಡೆಯುವ ಆಸೆಯಿಂದ ಅವರಿಗೆ ತೊಂದರೆ ಕೊಡಬಾರದು ಎಂಬುದೇ ಆಗಿತ್ತು. ಗುರುಗಳು ನಮಗಾಗಿ, ನಮ್ಮೊಳಗೆ ಆಧ್ಯಾತ್ಮಿಕವಾಗಿ ಏನನ್ನು ಮಾಡುತ್ತಿದ್ದಾರೋ ಅದನ್ನು ಅರಿತು ಅದರೊಳಗೆ ತನ್ಮಯರಾಗಬೇಕು ಮತ್ತು ಆ ಸ್ಥಿತಿಯನ್ನು ಕಾಪಾಡಿಕೊಳ್ಳಬೇಕು ಎಂದರು. ಗುರುಗಳು ಎಲ್ಲರನ್ನೂ ಆಶ್ರಮದೊಳಗೇ ಭೇಟಿಯಾಗಲು ಪ್ರಯತ್ನಿಸಿದರೂ ಆಶ್ರಮದ ಹೊರಗೆ ರಸ್ತೆ ರಿಪೇರಿ ಕೆಲಸ ನಡೆಯುತ್ತಿದ್ದುದರಿಂದ ಸೊ.ಮಾಧವರ ಮನೆಯಲ್ಲಿ ಎಲ್ಲರನ್ನು ಭೇಟಿಯಾದರು. ಒಂದು ದಿನ ಕೊಲ್ಕತ್ತಾ ಅಭ್ಯಾಸಿಗಳು, ಒಂದು ದಿನ ಸಿಕ್ಕಿಂ ಅಭ್ಯಾಸಿಗಳು ಹೀಗೆ ಎಲ್ಲರೂ ಗುರುಗಳನ್ನು ಭೇಟಿಯಾದರು. ಗುರುಗಳು ಬರೀ ಆಧ್ಯಾತ್ಮಿಕ ಕೆಲಸವಲ್ಲದೆ ಎಲ್ಲರನ್ನೂ ಭೇಟಿಯಾಗುವ ಹೆಚ್ಚಿನ ಶ್ರಮವನ್ನು ತೆಗೆದುಕೊಂಡರು. ಒಟ್ಟು 460 ಅಭ್ಯಾಸಿಗಳು ಭಾಗವಹಿಸಿದ್ದು ಆಶ್ರಮದ ಪೂರಾ ನವ ಚೇತನದ ಅನುಭವವಾಗುತ್ತಿತ್ತು.

## ಅಕ್ಟೋಬರ್ 2 ರಿಂದ 7, 2012

ಸುಮಾರು ಎಪ್ಪತ್ತು ಮಂದಿ ಚೀನಾ ಮತ್ತು ಪೌರ್ವಾತ್ಯ ದೇಶಗಳ ಅಭ್ಯಾಸಿಗಳು ಈ ಸಮ್ಮೇಳನದಲ್ಲಿ ಪಾಲ್ಗೊಳ್ಳಲು ಬಂದಿದ್ದರು. ಗುರುಗಳು ದಿನಪ್ರತಿ ನಡೆಯುತ್ತಿರುವ ಎಲ್ಲಾ ಕಾರ್ಯಕ್ರಮಗಳ ಬಗೆಗೆ ಆಗಾಗ್ಗೆ ಮಾಹಿತಿ ಪಡೆಯುತ್ತಿದ್ದರು. ಮತ್ತು ಅವಶ್ಯವಿರುವೆಡೆ ತಮ್ಮ ಸಲಹೆ ಮತ್ತು ಮಾರ್ಗದರ್ಶನ ನೀಡುತ್ತಿದ್ದರು.









## ಅಕ್ಟೋಬರ್ 9 ರಿಂದ 14, 2012

ಗುರುಗಳ ದಿವ್ಯ ಭೌತಿಕ ಉಪಸ್ಥಿತಿಯಡಿಯಲ್ಲಿ ಕೃಪಾಭರಿತರಾಗಿ ಆನಂದಿಸುವ ಅವಕಾಶ ಮಣಪಾಕ್ಕಂನ ಆಶ್ರಮದಲ್ಲಿದ್ದ 530 ಜನ ಅಭ್ಯಾಸಿಗಳಿಗೆ ಲಭಿಸಿತು.

ಪ್ರತಿ ದಿನ ಮೂರು ಶಕ್ತಿಶಾಲಿಯಾದ ಸತ್ಸಂಗಗಳು ಎಲ್ಲರನ್ನೂ ತುಂಬಿಸಿಬಿಟ್ಟಿತು. ನಿರ್ಮಲ ವಾತಾವರಣ, ಸ್ವಯಂ ಸೇವಕರುಗಳ ಭಕ್ತಿ, ಕಣ್ತೆರೆಸುವ ಭಾಷಣಗಳು ಮತ್ತು ಆಶ್ರಮದಲ್ಲಿದ್ದ ಶಾಂತ ಪರಿಸರ ನಿಬ್ಬೆರಗಾಗಿಸುವಂತಿದ್ದು ಎಲ್ಲರೂ ಹೆಚ್ಚು ಬಯಸುವಂತಿತ್ತು.

ಗುರುಗಳು ಧ್ಯಾನ ಮಂದಿರಕ್ಕೆ ಬಂದು ಮಾತನಾಡಿದರು, ಅವರ ಉಪಸ್ಥಿತಿ ಎಲ್ಲರಿಗೂ ಆಶ್ಚರ್ಯ ತಂದಿತು. ಮತ್ತೊಂದು ಅಚ್ಚರಿ ಸೊ.ಕಮಲೇಶರೊಂದಿಗೆ ಅವರ ಕಚೇರಿಯಲ್ಲಿ ಕಳೆದ ಸಮಯ, ಅಲ್ಲಂತೂ ಪ್ರೇಮವು ಪ್ರವಹಿಸುತ್ತಿತ್ತು. ಒಂದು ವಾರ ಅತ್ಯಲ್ಪ ಕಾಲವಾಗಿದ್ದರೂ ನಾವಲ್ಲಿ ಪಡೆದದ್ದು ಯುಗ ಯುಗಗಳಿಗೂ ಸಾಲುವಷ್ಟಿತ್ತು. ಅವರು ಕೊಟ್ಟ ಸ್ಥಿತಿಯನ್ನು ಕಾಪಾಡಿಕೊಳ್ಳುಬುದು ಈಗ ನಮ್ಮ ಜವಾಬ್ದಾರಿ. ಎಲ್ಲರಿಗೂ ತೃಪ್ತಿ ಆನಂದ ನೀಡಿದ ಈ ಭೇಟಿ ಫಲಪ್ರದವಾಗಿತ್ತು.

## ಇ-ಸಮನ್ವಯಕಾರರ ಸಹಾಯ ಕೇಂದ್ರ, ಲಖ್ನೋ

ಲಖ್ನೋ ಆಶ್ರಮವು ಇಂಟರ್‌ನೆಟ್ ಬಳಕೆಯ ಅರಿವು ಕಡಿಮೆ ಇರುವ ಅಭ್ಯಾಸಿಗಳಿಗಾಗಿ ಇ-ಸಮನ್ವಯಕಾರರ ಸಹಾಯ ಕೇಂದ್ರವನ್ನು ತೆರೆಯಿತು. ಇದರಲ್ಲಿ ಪ್ರಾಥಮಿಕ ವಿಷಯಗಳಾದ ಇ ಮೇಲ್ ಕಳಿಸುವುದು, ಅರ್ಜಿಗಳನ್ನು ತುಂಬುವುದು, ಮಿಷನ್ನಿನ ಜಾಲತಾಣ ನೋಡುವುದು, ಮತ್ತು ವ್ಹಿಸ್ಪರ್ಸ್ ಮತ್ತು ಡೈಲಿ ರಿಫ್ಲೆಕ್ಶನ್‌ಗಳಿಗೆ ಸದಸ್ಯರಾಗುವುದು ಮೊದಲಾದ ವಿಷಯಗಳ ಕುರಿತು ತಿಳಿಸಿಕೊಡಲಾಯಿತು. ಅಭ್ಯಾಸಿಗಳಿಗೆ ಇತ್ತೀಚಿನ ಭಾಷಣಗಳನ್ನು ನೋಡುವ ಮತ್ತು ಸಂದೇಶಗಳನ್ನು ಪಡೆಯುವ ಬಗೆಗೆ ತಿಳಿಸಿಕೊಡಲಾಯಿತು.

## ಮಂಗಳೂರು ಆಶ್ರಮದ ಭೂಮಿ



ಮಂಗಳೂರಿನ ಅಭ್ಯಾಸಿಗಳಿಗೆ ಧ್ಯಾನ ನಡೆಸಲು ಸ್ವಂತ ಸ್ಥಳಕ್ಕಾಗಿ ನಡೆಸಿದ ಅನ್ವೇಷಣೆಯು, ಬಂಟ್ವಾಳ ತಾಲ್ಲೂಕಿನಲ್ಲಿ 12 ಎಕರೆ ಭೂಮಿಯನ್ನು ಮಂಗಳೂರಿನಿಂದ 18 ಕಿ.ಮೀ ದೂರದಲ್ಲಿ ಬೆಂಗಳೂರು ಮಂಗಳೂರು ಹೆದ್ದಾರಿಯ ಬಳಿ ಖರೀದಿಸುವುದರೊಂದಿಗೆ ಮುಕ್ತಾಯವಾಯಿತು. ಹೆದ್ದಾರಿಯಿಂದ 5 ಕಿ.ಮೀ ದೂರದಲ್ಲಿರುವ ಈ ಸ್ಥಳ, ಕೆನರಾ ಇಂಜಿನಿಯರಿಂಗ್ ಕಾಲೇಜ್‌ನ ಎದುರಿಗಿದೆ. 4 ಎಕರೆಯು ಆಶ್ರಮಕ್ಕಾಗಿ ಮೀಸಲಾದರೆ ಉಳಿದ ಎಂಟು ಎಕರೆ ಅಭ್ಯಾಸಿಗಳ ವಸತಿ ಉದ್ದೇಶಕ್ಕಾಗಿ ಮೀಸಲಾಗಿದೆ.

ಸೆಪ್ಟಂಬರ್ 19 2012ರಂದು ನಿರ್ಮಾಣ ಕಾರ್ಯ ಪ್ರಾರಂಭವಾಗುವ ಮೊದಲು ಸತ್ಸಂಗವನ್ನು ನಡೆಸಲಾಯಿತು. ಗುರುಗಳು ತಮ್ಮ ಆಶೀರ್ವಾದಗಳನ್ನು ತಿಳಿಸಿದ್ದರಲ್ಲದೆ, ಸೊ.ಕಮಲೇಶ ಪಟೇಲರು, ಶುದ್ಧ ಮನಸ್ಸಿನಿಂದ ಕೆಲಸ ಪ್ರಾರಂಭಿಸಲು ಅಭ್ಯಾಸಿಗಳು ಹಿಂದಿನ ದಿನವೂ ಬಂದು ಧ್ಯಾನ ಮಾಡಲು ಹೇಳಿದ್ದರು. ಮಂಗಳೂರು, ಪುತ್ತೂರು ಮತ್ತು ಮೈಸೂರಿನ ಐವತ್ತು ಅಭ್ಯಾಸಿಗಳು ಪಾಲ್ಗೊಂಡಿದ್ದರು. ವಾತಾವರಣವು ಗುರುಗಳ ಕೃಪೆಯಿಂದ ತುಂಬಿಹೋಗಿತ್ತು. ಸತ್ಸಂಗದ ನಂತರ 'ಸಹಜಮಾರ್ಗದ ಸಿದ್ಧಾಂತಗಳು, ಸಂಪುಟ 15'ರಿಂದ ಗುರುಗಳ ಸಂದೇಶವೊಂದನ್ನು ಸೊ.ಪ್ರಸಾದ್ ಕೃಷ್ಣರವರು ಓದಿದರು. ನಂತರ ಅವರು ಮಾತನಾಡಿ ಸೊ.ಸುಬ್ರಾಯರ ಅತ್ಯುತ್ತಮ ಕೆಲಸವನ್ನು ಶ್ಲಾಘಿಸಿದರು. ಸೊ.ರಾಧಾಕೃಷ್ಣ, ಸೊ.ಅಣ್ಣಾಜಿ ರಾವ್, ಸೊ.ನಳಿನಿ ಸಹ ಮಾತನಾಡಿದರು. ಸೊ.ವನಜಾಕ್ಷಿಯವರು ದಿ.ಶ್ರೀ ಸರ್ನಾಡರಿಂದ ರಚಿಸಲ್ಪಟ್ಟ ಭಜನೆಯೊಂದನ್ನು ಹಾಡಿದರು. ಸತ್ಸಂಗದ ನಂತರ ರಸ್ತೆ ಮತ್ತು ಬಡಾವಣೆಯ ಕಾಮಗಾರಿ ಕೆಲಸಗಳು ಪ್ರಾರಂಭವಾದವು. ಸತ್ಸಂಗ ನಡೆಸಲು ತಾತ್ಕಾಲಿಕ ಧ್ಯಾನ ಮಂದಿರದ ನಿರ್ಮಾಣ ಶೀಘ್ರದಲ್ಲಿಯೇ ನಿರ್ಮಿಸಲಾಗುವುದು.



# ಯುವ ಕಾರ್ಯಕ್ರಮಗಳು

## ಯುವ ಕಾರ್ಯಕ್ರಮ, ಕೊಲ್ಕತ

ಅಕ್ಟೋಬರ್ 14 ಮತ್ತು 15ರಂದು ಸುಮಾರು 25 ಜನ ಅಭ್ಯಾಸಿಗಳು ಬಾಬೂಜಿ ಮೆಮೋರಿಯಲ್ ಆಶ್ರಮದಲ್ಲಿ ಸೇರಿದ್ದರು. ಬೆಳಗಿನ ಉಪಾಹಾರ ಮತ್ತು ಸತ್ಸಂಗದ ನಂತರ 'ಪ್ರಾರ್ಥನೆ' ಸಂದರ್ಭದಲ್ಲಿ 'ಅಭ್ಯಾಸದ ಪ್ರಾಥಮಿಕ'ವಿಷಯಗಳ ಕುರಿತು ಸ.ಲೀನಾ ದವೆ ರವರು ಕಾರ್ಯಕ್ರಮ ನಡೆಸಿಕೊಟ್ಟರು. ಪ್ರತಿಯೊಬ್ಬ ಅಭ್ಯಾಸಿಯೂ 'ಪ್ರಾರ್ಥನೆ'ಯ ಆಳವಾದ ಅರ್ಥವನ್ನು ಅರಿಯಲು ಸಹಾಯವಾಯಿತು. ಸಂಜೆ 'ಸೇವೆ'ಯ ಬಗ್ಗೆ ಗುರುಗಳು ನೀಡಿರುವ ಎರಡು ಭಾಷಣಗಳನ್ನು ಪ್ರದರ್ಶಿಸಲಾಯಿತು.

15 ರಂದು ಗುರುಗಳು ಹೇಳಿರುವ ಮೂರು 'ಒ' ಗಳ ಬಗ್ಗೆ ಮತ್ತು ತಮ್ಮ ಜೀವನದಲ್ಲಿ ಅವುಗಳ ಮಹತ್ವದ ಬಗ್ಗೆ ಮನನ ಮಾಡುವ ಕಾರ್ಯಕ್ರಮವಿತ್ತು. ಇದು ಆತ್ಮೋನ್ನತಿಯ ಕಡೆಗೆ ಪ್ರೇರೇಪಿಸುವ ಅವಕಾಶವಷ್ಟೇ ಆಗಿರದೆ ತಮ್ಮ ಅನುಭವಗಳನ್ನು ಪ್ರಾಮಾಣಿಕವಾಗಿ ಹಂಚಿಕೊಳ್ಳುವ ಅವಧಿಯೂ ಆಗಿತ್ತು.

ಮಧ್ಯಾಹ್ನ ಖರಗಪುರದ ಕ್ರೆಸ್ಟ್ ಬಗೆಗೆ ವಿಡಿಯೋ ಪ್ರದರ್ಶನವಿದ್ದು, ಮುಂದೆ ಬರಲಿರುವ ಯುವ ಸಮ್ಮೇಳನದಲ್ಲಿ ಭಾಗವಹಿಸುವಂತೆ ಪ್ರೇರೇಪಿಸಲಾಯಿತು. ನಂತರ ಗುರುಗಳು 'ಸೇವೆ'ಬಗ್ಗೆ ಮಾಡಿರುವ ಭಾಷಣವನ್ನು ಪ್ರದರ್ಶಿಸಲಾಯಿತು.

ಎರಡು ದಿನಗಳ ತಮ್ಮ ವಾಸ್ತವ್ಯದಲ್ಲಿ ಯುವಕರು ಸರಿಯಾದ ಸಮಯದಲ್ಲಿ ತಮ್ಮ ವೈಯುಕ್ತಿಕ ಅಭ್ಯಾಸ ನಡೆಸುವ ಮೂಲಕ ಶಿಸ್ತುಬದ್ಧ ಜೀವನ ನಡೆಸಲು ಉತ್ತೇಜಿಸಲಾಯಿತು. ಸಂಜೆಯ 4ರ ಸತ್ಸಂಗದೊಂದಿಗೆ ಕಾರ್ಯಕ್ರಮವು ಅಂತ್ಯಗೊಂಡಿತು. ಯುವ ಅಭ್ಯಾಸಿಗಳು 2 ದಿನಗಳ ಕಾಲ ಆಶ್ರಮದಲ್ಲಿ ತಂಗಿದ್ದರು. ಅಡುಗೆ ಮನೆ ಸ್ವಯಂ ಸೇವಕರು ಮತ್ತು ಆಶ್ರಮದ ವ್ಯವಸ್ಥಾಪಕರೂ ಸಹ ಈ ಗುಂಪಿನೊಂದಿಗೆ ಸೇರಿದ್ದು ಎಲ್ಲರಲ್ಲೂ ವಿಶೇಷವಾದ ಬಾಂಧವ್ಯ ಬೆಳೆಯಿತು.

## ಅಹಮದ್ ನಗರ್ ಕೇಂದ್ರ, ಮಹಾರಾಷ್ಟ್ರ

ಆಗಸ್ಟ್ 26ರಂದು ಯುವ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. 18 ರಿಂದ 35 ವಯಸ್ಸಿನೊಳಗಿನ ಎಂಟು ಅಭ್ಯಾಸಿಗಳು ಭಾಗವಹಿಸಿದ್ದರು. ಈ ಕಾರ್ಯಕ್ರಮದ ಮುಖ್ಯ ಉದ್ದೇಶ ಕೇಂದ್ರದ ಬೆಳವಣಿಗೆಯಲ್ಲಿ ಯುವಕರನ್ನು ತೊಡಗಿಸಲು ಪ್ರೇರೇಪಣೆ ನೀಡುವುದಾಗಿತ್ತು. ಕಾರ್ಯಕ್ರಮವು ಭಜನೆಯೊಂದಿಗೆ ಪ್ರಾರಂಭವಾಯಿತು. ನಂತರ ಸಂಸ್ಕಾರಗಳ ಕುರಿತು ಕಿರು ನಾಟಕ ಪ್ರದರ್ಶಿಸಲಾಯಿತು. ಸಹಜಮಾರ್ಗವನ್ನು ಇತರರಿಗೆ ಪರಿಚಯಿಸುವುದು ಹೇಗೆ ಮತ್ತು ಲೌಕಿಕ ಮತ್ತು ಆಧ್ಯಾತ್ಮಿಕ ಜೀವನದ ಸಂತುಲನೆ ಎಂಬುದುರ ಕುರಿತು ಭಾಷಣಗಳು ಮತ್ತು ಚರ್ಚೆ ನಡೆಯಿತು. 'ಯುರೋಪಿಯನ್ ಯುತ್ ಸೆಮಿನಾರ್' ವಿಡಿಯೋ ತೋರಿಸುವುದರ ಮೂಲಕ ಕಾರ್ಯಕ್ರಮ ಮುಕ್ತಾಯವಾಯಿತು. ಎಲ್ಲಾ ಅಭ್ಯಾಸಿಗಳು ಆಸಕ್ತಿಯಿಂದ ಸಕ್ರಿಯವಾಗಿ ಎಲ್ಲಾ ಚರ್ಚೆಗಳಲ್ಲಿ ಪಾಲ್ಗೊಂಡರು. ಕಾರ್ಯಕ್ರಮವು ಪರಸ್ಪರ ಅಂತಃಕ್ರಿಯೆಯಿಂದ ಕೂಡಿದ್ದು ಪರಿಣಾಮಕಾರಿಯಾಗಿತ್ತು.

## ಜಾಗತಿಕ ಯುವ ಜಾಲ

ಸಹಜಮಾರ್ಗದ ವಿಶ್ವವ್ಯಾಪಿ ಯುವಜನತೆಯ ಸಮುದಾಯ ನಿರ್ಮಿಸುವುದು ಇದರ ಉದ್ದೇಶ. ಅಂತರ್ಜಾಲ ಇದರ ಸಹಜ ಪ್ರಾರಂಭಿಕ ಹಂತವಾಗಿದ್ದು ವ್ಯಾಪಕವಾಗಿ ಇದನ್ನು ಬಳಸುವ ಜಾಲಿಗರು ಒಂದೆಡೆ ಅಂತರ್ಜಾಲ ವೇದಿಕೆಯಲ್ಲಿ ಸೇರಬಹುದಾಗಿದೆ. ಈ ಜಾಲವು ಸಹಜಮಾರ್ಗದ ಪ್ರಾರಂಭವನ್ನು ಪ್ರಚೋದಿಸುವುದಲ್ಲದೆ ಮುಖ್ಯ ಯೋಜನೆಗಳಿಗೆ ತುರ್ತಾಗಿ ಸ್ವಯಂ ಸೇವಕರನ್ನು ಒಟ್ಟುಗೂಡಿಸುವಲ್ಲಿ ಸಹ ಸಹಕಾರಿ.

ಯುವ ಅಭ್ಯಾಸಿಗಳು ಸಾಮಾನ್ಯವಾಗಿ ಒಂಟಿ ಅಥವಾ ಇತ್ತೀಚಿಗೆ ವಿವಾಹವಾದವರಾಗಿರುತ್ತಾರೆ. ಬಹಳಷ್ಟು ಜನ ವಿದ್ಯಾರ್ಥಿಗಳಾಗಿದ್ದು ಅಥವಾ ಹೊಸದಾಗಿ ಉದ್ಯೋಗಕ್ಕೆ ಸೇರಿದವರಾಗಿರುತ್ತಾರೆ. ಜೀವನ ಕ್ರಿಯಾಶೀಲವಾಗಿದ್ದು ಸದಾ ಕಾರ್ಯನಿರತರಾಗಿರುತ್ತಾರೆ. ಸುತ್ತ ಆಮಿಷ ಮತ್ತು ಅಪೇಕ್ಷೆಗಳಿರುತ್ತವೆ, ಇಂತಹ ಸಮಯದಲ್ಲಿ ಅಭ್ಯಾಸದ ತೀವ್ರ ಅಗತ್ಯವಿದ್ದು ವಿಪರ್ಯಾಸವೆಂದರೆ ಆಗಲೇ ಅದು ನಿರ್ಲಕ್ಷ್ಯಕ್ಕೊಳಗಾಗುತ್ತದೆ.

ಮೊದಲ ಯುವ ಜಾಲ ಸಮ್ಮೇಳನ ಜೂನ್ 29ರಂದು ನಡೆಯಿತು. ಸೊ.ಬಿಲ್ ವೆಕಾಟ್ ಮಿಷನ್ನಿನಲ್ಲಿ ಯುವಕರು ತೊಡಗಿಸಿಕೊಳ್ಳಲು ಕರೆ ನೀಡಿದರು. ಸೊ.ಸಂತೋಷ್ ಖಾಂಜಿ ಸಾಧನೆಯಲ್ಲಿ ಶಿಸ್ತಿನ ಮಹತ್ವದ ಬಗ್ಗೆ ಹೇಳಿದರು.

ಆಗಸ್ಟ್ 25ರಂದು ಮತ್ತೆ ಯುವ ಸಮೂಹ ಅಂತರ್ಜಾಲದಲ್ಲಿ ಸೇರಿತು. ಕ್ಯಾಲಿಫೋರ್ನಿಯ, ಆಸ್ಟ್ರೇಲಿಯ, ಲಾಟಿನ್ ಅಮೇರಿಕ, ಯುರೋಪ್ ಮತ್ತು ಮಧ್ಯ ಪ್ರಾಚ್ಯ ಮತ್ತು ಭಾರತ ದೇಶಗಳ ಯುವಕರು ಭಾಗವಹಿಸಿದ್ದರು. ಉತ್ತೇಜಿಸುವ ಮತ್ತು ಸುಂದರವಾದ ಪ್ರಸ್ತುತಿಗಳು ಕಾಲ ಮತ್ತು ದೇಶಗಳನ್ನು ಮೀರಿ ಪ್ರೇಮಮಯ ವಾತಾವರಣವನ್ನು ನಿರ್ಮಿಸಿತ್ತು.

ಸುದ್ದಿ ಮತ್ತು ಆಹ್ವಾನಕ್ಕೆ ನೋಂದಣಿಯಾಗಲು ಜಾಲತಾಣ:
https://docs.google.com/spreadsheet/viewform?formkey=dE8wRmdCR2txVkNlcXAtTmNCX2d3UHc6MA#gid=o

## ಸಹಜ ವಿಹಾರ, ಭಿಲ್ವಾರ, ರಾಜಸ್ಥಾನ

29 ಸೆಪ್ಟೆಂಬರ್ ಇಪ್ಪತ್ತೆರಡು ಯುವ ಮತ್ತು ಮಕ್ಕಳಿದ್ದ ಅಭ್ಯಾಸಿಗಳ ಗುಂಪು ಹರಣಿ ಮಹಾದೇವ್ ಎಂಬ ವಿಹಾರ ಸ್ಥಳದಲ್ಲಿ ಸೇರಿದರು.'ಸಿಂಹ ಹೃದಯ' ವಿಚಾರ ತೆಗೆದುಕೊಂಡು ಅಲ್ಲಿನ ನಾಯಕತ್ವ ಗುಣಗಳು, ನಿರ್ಭಯತೆ ಗಳ ಕುರಿತು ಚರ್ಚಿಸಲಾಯಿತು. ಪ್ರಶ್ನೋತ್ತರ ವೇಳೆಯಲ್ಲಿ ಪ್ರಶ್ನೆಗಳಿಗೆ ಅಭ್ಯಾಸಿಗಳು ನೀಡಿದ ಉತ್ತರ, ಆ ವಿಷಯಕ್ಕೆ ಗುರುಗಳು ನೀಡಿರುವ ಉಕ್ತಿಗಳಿಗೆ ತಾಳೆಯಾಗುತ್ತಿತ್ತು. ಮಾತನಾಡದೆ ಸನ್ನೆಗಳ ಮೂಲಕ ವಿಚಾರ ತಿಳಿಸುವ ಆಟ ತಮಾಷೆಯಾಗಿದ್ದರೂ ಚಿಂತನಾರ್ಹವಾಗಿತ್ತು. ಈ ವಿಹಾರ ಭಾಗವಹಿಸಿದ್ದವರೆಲ್ಲರಿಂದಲೂ ಪ್ರಶಂಸಾರ್ಹವಾಯಿತು.






## ಎನ್‌ಎಸ್‌ಎಸ್ ಶಿಬಿರ– ತಿರುಪ್ಪೂರು ಡೈಮಂಡ್ ಜುಬಿಲಿ ಪಾರ್ಕ್



ನಂಜಪ್ಪ ಕಾರ್ಪೋರೇಷನ್ ಪ್ರೌಢಶಾಲೆ ಮತ್ತು ಕೆಎಸ್‌ಸಿ ಸರಕಾರಿ ಪ್ರೌಢಶಾಲೆಗಳ ಸಹಯೋಗದೊಂದಿಗೆ 60 ವಿದ್ಯಾರ್ಥಿಗಳಿಗಾಗಿ ಎನ್‌ಎಸ್‌ಎಸ್ ಶಿಬಿರವನ್ನು ಮಿಷನ್ನಿನ ವತಿಯಿಂದ ಸೆಪ್ಟೆಂಬರ್ 23ರಿಂದ 29ರವರೆಗೆ ತಿರುಪ್ಪೂರಿನ ಡಿಜೆಪಾರ್ಕ್‌ನಲ್ಲಿ ಆಯೋಜಿಸಲಾಗಿತ್ತು.

23ರಂದು ಎರಡೂ ಶಾಲೆಗಳ ಮುಖ್ಯೋಪಾಧ್ಯಾಯರು ಮತ್ತು ಇತರೆ ಶಾಲೆಗಳ ಶಿಕ್ಷಕರು ಉದ್ಘಾಟನಾ ಸಮಾರಂಭದಂದು ಭಾಗವಹಿಸಿದ್ದರು. ರಸ್ತೆ ಸುರಕ್ಷೆ, ಪ್ಲಾಸ್ಟಿಕ್ ನಿವಾರಣೆ, ಡೆಂಗೂ ಜ್ವರ, ಪ್ರಥಮ ಚಿಕಿತ್ಸೆ ಮತ್ತು ಸಸಿ ನೆಡುವ ಕುರಿತು ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ಅಭ್ಯಾಸಿಗಳು ಮತ್ತು ಅನೇಕ ಸಮಾಜಸೇವಾ ಸಂಸ್ಥೆಗಳ ಕಾರ್ಯಕರ್ತರು ನಡೆಸಿಕೊಟ್ಟರು. ಸಂಜೆ– ರಸಪ್ರಶ್ನೆ , 'ವಿವೇಕಾನಂತರ ಮತ್ತು ಆಧ್ಯಾತ್ಮ' ಕುರಿತು ಉಪನ್ಯಾಸ ಮತ್ತು ಪ್ರಕೃತಿ ಸಂರಕ್ಷಣೆಯ ಬಗ್ಗೆ ಕಿರುಚಿತ್ರಗಳು ನಡೆಸಲ್ಪಟ್ಟವು.

ಪಂಚಾಯತ್ ಅಧ್ಯಕ್ಷರಾದ ಪಳನಿಸಾಮಿಯವರು 29ರಂದು ಮುಕ್ತಾಯ ಸಮಾರಂಭದ ಮುಖ್ಯ ಅತಿಥಿಯಾಗಿದ್ದು, ದ.ತಿರುಪ್ಪೂರಿನ ಡಿಎಸ್ಪಿ ಶ್ರೀ ರಾಜಾರಾಮ್‌ರವರು ವಿದ್ಯಾರ್ಥಿಗಳಿಗೆ ಪ್ರಮಾಣಪತ್ರಗಳನ್ನು ಹಂಚಿದರು. ಎರಡೂ ಶಾಲೆಗಳ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಡಿಜೆಪಾರ್ಕ್‌ನಲ್ಲಿಯೇ ಏಳು ದಿನಗಳ ಕಾಲ ತಂಗಿದ್ದರು. ಅತಿಥಿಗಳಿಗೆ ನಮ್ಮ ಗುರುಗಳು ಮತ್ತು ಸಹಜಮಾರ್ಗದ ಬಗ್ಗೆ ತಿಳಿಸಲು ಇದೊಂದು ಸದವಕಾಶವಾಗಿತ್ತು.

## ಮದುರೈ ಆಶ್ರಮದಲ್ಲಿ ಆಧ್ಯಾತ್ಮಿಕ ಸಭೆ

ವಲಯ ಆಯೋಜಕರಾದ ಸೋ. ಎನ್.ಪ್ರಕಾಶ್ ಮತ್ತು ವಲಯ ಮುಖ್ಯಸ್ಥರಾದ ಸೋ.ಟಿ.ವಿ.ವಿಶ್ವನಾಥ ರಾವ್‌ರವರುಮದುರೈ ಆಶ್ರಮದಲ್ಲಿ ಸೆಪ್ಟೆಂಬರ್ 28ರಿಂದ 30ರವರೆಗೆ ಮೂರು ದಿನದ ಸಭೆಯನ್ನು ಆಯೋಜಿಸಿದ್ದರು. ಮದುರೈ ಮತ್ತು ಸಮೀಪದ ಕೇಂದ್ರಗಳಿಂದ ಸುಮಾರು 625 ಅಭ್ಯಾಸಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

28ರಂದು ಕಾರ್ಯಕ್ರಮವು 5:15ರ ಸತ್ಸಂಗದೊಂದಿಗೆ ಪ್ರಾರಂಭವಾಯಿತು.ರಾತ್ರಿ ಭೋಜನ ಮತ್ತು ವಿಶ್ವಪ್ರಾರ್ಥನೆಯ ನಂತರ 9:15ಕ್ಕೆ ಮತ್ತೊಂದು ಸತ್ಸಂಗವನ್ನು ನಡೆಸಲಾಯಿತು. ಸೋ. ಪ್ರಕಾಶ್‌ರವರು ಇದೊಂದು ಗಾಢವಾದ ಅಧ್ಯಾತ್ಮಿಕ ಸಭೆಯಾಗಿದ್ದು ಎಲ್ಲಾ ಅಭ್ಯಾಸಿಗಳು ಸತ್ಸಂಗಗಳ ನಡುವಿನ ಸಮಯದಲ್ಲಿ ಆದಷ್ಟೂ ಧ್ಯಾನದಲ್ಲಿ ಮಗ್ನರಾಗಿರಬೇಕು, ಮಿಷನ್ನಿನ ಪುಸ್ತಕ ವಾಚನ ಮಾಡಬೇಕು ಅಥವಾ ಮೌನವಾಗಿದ್ದು ಗುರುಗಳ ಕೃಪೆ ಮತ್ತು ಪ್ರಾಣಾಹುತಿಯನ್ನು ಅರಗಿಸಿಕೊಳ್ಳಬೇಕು, ಹೃದಯದಾಳದಿಂದ ಸ್ವವಿಮರ್ಶೆ ನಡೆಸುತ್ತಾ ತಮ್ಮಲ್ಲಿ ಗುರುಗಳ ಉಪಸ್ಥಿತಿಯನ್ನು ಅನುಭವಿಸಬೇಕು ಎಂದು ಹೇಳಿದರು.

ಅಭ್ಯಾಸಿಗಳಿಗೆ ಅವರ ಆಂತರಿಕ ಸ್ಥಿತಿ ಮತ್ತು ಬದಲಾವಣೆಗಳನ್ನು ದಿನಚರಿಯಲ್ಲಿ ದಾಖಲಿಸುವಂತೆ ಕೇಳಿಕೊಳ್ಳಲಾಗಿತ್ತು. ದಿನಚರಿಯ ಮಹತ್ವ ಹಾಗೂ ಧ್ಯಾನದ ಮೊದಲು ಮತ್ತು ಅನಂತರದ ಸ್ಥಿತಿಗಳನ್ನು ಅವಲೋಕಿಸಲು ಸಹಾಯಕ ಅಂಶಗಳನ್ನು ಕುರಿತ ಕರಪತ್ರಗಳನ್ನು ಭಾಗಿಗಳಿಗೆ ಹಂಚಲಾಯಿತು.

29ರಂದು, ನಾಲ್ಕು ಸತ್ಸಂಗಗಳನ್ನು ನಡೆಸಲಾಯಿತು ಮತ್ತು ಸೋ. ಪ್ರಕಾಶ್‌ರವರು 'ದಿವ್ಯಲೋಕದಿಂದ ಪಿಸುಮಾತುಗಳು' ಪುಸ್ತಕದ ಸಂದೇಶಗಳನ್ನು ಪ್ರತೀ ಸತ್ಸಂಗದ ನಂತರ ಓದಿಹೇಳಿದರು. ಭಾನುವಾರ, 30ರಂದು ಬೆಳಿಗ್ಗೆ 7.30ಕ್ಕೆ ಸತ್ಸಂಗದ ನಂತರ 11:30ಕ್ಕೆ ಸೋ ಪ್ರಕಾಶ್‌ರವರು ಸತ್ಸಂಗ ನಡೆಸಿಕೊಟ್ಟರು. ಸತ್ಸಂಗದ ನಂತರ, ಸೋ.ರಾವ್‌ರವರು ಈ ಸಭೆಯು ಅಭ್ಯಾಸಿಗಳು ಸ್ವತಃ ತಮ್ಮ ಮೇಲೆ ಗಮನಹರಿಸಲು ಸಹಾಯಕ ಎಂದು ಹೇಳಿದರು. ಸೋ. ಪ್ರಕಾಶ್‌ರವರು ಅಭ್ಯಾಸಿಗಳು ಗುರುಗಳ ಇಚ್ಛೆಯಂತೆ ಸಮಾಜದಲ್ಲಿ ಪ್ರೇಮ, ಸಾಮರಸ್ಯ ಮತ್ತು ಶಾಂತಿಯ ದೂತರಾಗಬೇಕು ಎಂದು ಹೇಳಿದರು.

## ತಮಿಳುನಾಡಿನ ದಕ್ಷಿಣಪ್ರಾಂತ್ಯಕ್ಕೆ ವಲಯ ವ್ಯವಸ್ಥಾಪಕರ ಭೇಟಿ



ದ.ತಮಿಳುನಾಡಿನ ವಲಯ ವ್ಯವಸ್ಥಾಪಕರಾದ ಸೋ. ಟಿ.ವಿ.ವಿಶ್ವನಾಥ ರಾವ್‌ರವರುಆಗಸ್ಟ್ 22ರಿಂದ 26ರವರೆಗೆ ತಿರುನೆಲ್ವೇಲಿ ಮತ್ತು ಟುಟಿಕೋರಿನ್ ಜಿಲ್ಲೆಗಳ ಪ್ರವಾಸ ಮಾಡಿದರು. ಅವರು ಚಿನ್ನವಲ್ಲಿಕುಳಂ, ಶಿವಕಾಶಿ, ಕೋವಿಲ್‌ಪಟ್ಟಿ, ಟುಟಿಕೋರಿನ್, ತಿರುನೆಲ್ವೇಲಿ, ಚೇರನ್‌ಮಹಾದೇವಿ, ವಲ್ಲಿಯೂರ್, ಕಲಕ್ಕಾಡ್, ಕೊಟ್ಟೈಕರುಂಗುಲಂ ಮತ್ತು ವಡಕಂಗುಲಂ ಮುಂತಾದ ಕೇಂದ್ರಗಳಿಗೆ ಭೇಟಿ ನೀಡಿದರು. ಸಾತೂರು ಮತ್ತು ಅಲಮಾರತುಪಟ್ಟಿಯಲ್ಲಿ ಹೊಸ ಕೇಂದ್ರಗಳನ್ನು ಕೆಲವೇ ಅಭ್ಯಾಸಿಗಳ ಉಪಸ್ಥಿತಿಯಲ್ಲಿ ಉದ್ಘಾಟಿಸಲಾಯಿತು.

ಸೋ. ರಾವ್‌ರವರು ತೂತ್ತುಕುಡಿಯ ರಾಷ್ಟ್ರೀಯ ಶಾಖೋತ್ಪಾದನಾ ಕೇಂದ್ರ ಮತ್ತು ಹೋಲಿ ಕ್ರಾಸ್ ಗೃಹವಿಜ್ಞಾನ ವಿದ್ಯಾಲಯಗಳಲ್ಲಿ ನಡೆಸಿದ ಮುಕ್ತಸಭೆಯಲ್ಲಿ ಮಾತನಾಡಿದರು. ಸಮೂಗರಂಗಪುರಂ ಮತ್ತು ಮುಕ್ಕೋಡಲ್‌ಗಳಲ್ಲಿಯೂ ಕಾರ್ಯಕ್ರಮ ನಡೆಯಿತು. ಈ ಪ್ರವಾಸದಲ್ಲಿ ಅನೇಕ ಸ್ಥಳಗಳಲ್ಲಿ ಉತ್ಕಾಂಕ್ಷಿಗಳಿಗೆ ಪರಿಚಯಾತ್ಮಕ ಬೈಠಕುಗಳನ್ನು ನೀಡಿದ್ದರಿಂದ ತಮಿಳುನಾಡಿನ ಈ ಭಾಗದಲ್ಲಿ ಮಿಷನ್ನಿನ ಚಟುವಟಿಕೆಗಳು ಭರದಿಂದ ಹರಡಿದಂತಾಯಿತು.

# ತರಬೇತಿ ಕರ್ಯಕ್ರಮಗಳು

## ಪ್ರಕಟನಾ ಕಾರ್ಯಾಗಾರ– ಮಂಗಳೂರು, ಕರ್ನಾಟಕ



ಮಂಗಳೂರಿನಲ್ಲಿ ಐವತ್ತೆಂಟು ಭಾಗಿಗಳೊಂದಿಗೆ 'ಮಿಷನ್ ಸಾಹಿತ್ಯವನ್ನು ಓದುವ ಅನುಭವ ಮತ್ತು ಮೋಜನ್ನು ಹಂಚಿಕೊಳ್ಳುವ' ಕುರಿತು ಕಾರ್ಯಾಗಾರವನ್ನು ಪೂರ್ಣದಿನ ನಡೆಸಲಾಯಿತು. ಕಾರ್ಯಾಗಾರದಲ್ಲಿ ಓದಿನ ಮಹತ್ವ, ಏತಕ್ಕೆ ಓದಬೇಕು, ಅದರ ಆಧ್ಯಾತ್ಮಿಕ ಲಾಭಗಳು, ಓದುವಾಗಿನ ನಮ್ಮ ಮನಸ್ಥಿತಿ ಹಾಗೂ ಆಧ್ಯಾತ್ಮಿಕ ಗುರಿ ಮುಟ್ಟಲು ಪುಸ್ತಕಗಳು ನೀಡುವ ಮಾರ್ಗದರ್ಶನದ ಕುರಿತು ತಿಳಿಸಲಾಯಿತು.ನಮ್ಮ ಕಣ್ತೆರೆಸುವ ಮಾಹಿತಿ ಹೊಂದಿದ ಗುರುಗಳ ಉಪನ್ಯಾಸಗಳನ್ನು ಕೇಳಿಸಿ ಮತ್ತು ದೃಶ್ಯತುಣುಕುಗಳನ್ನು ತೋರಿಸಲಾಯಿತು. ಕಾರ್ಯಕ್ರಮವು ಸತ್ಸಂಗದೊಂದಿಗೆ ಮುಕ್ತಾಯವಾಯಿತು.

## ಪ್ರಶಿಕ್ಷಕರ ಸಭೆ, ಕೇರಳ

ಸೆಪ್ಟೆಂಬರ್ 23ರಂದು ಉತ್ತರ ಮಲಬಾರಿನ ಕೇಂದ್ರಗಳ ಪ್ರಶಿಕ್ಷಕರು ತಲಸ್ಸೆರಿ ಕೇಂದ್ರದಲ್ಲಿ ಒಟ್ಟುಗೂಡಿ ಕೇಂದ್ರಗಳ ಅಭಿವೃದ್ಧಿ ಮತ್ತು ಪೂರ್ಣದಿನ ಕಾರ್ಯಕ್ರಮಗಳ ಕಾರ್ಯವೈಖರಿಯನ್ನು ಚರ್ಚಿಸಿದರು. ಪೂರ್ಣದಿನದ ಕಾರ್ಯಕ್ರಮದಂದು ಆಯ್ಕೆ ಮಾಡಿದ ಪ್ರಕರಣದ ವಿಷಯಾಂತರವಾಗಬಾರದು ಹಾಗು ಎಲ್ಲಾ ಅಭ್ಯಾಸಿಗಳಿಗೂ ತಮ್ಮ ಅಭಿಪ್ರಾಯ ವ್ಯಕ್ತ ಪಡಿಸಲು ಅವಕಾಶ ನೀಡಬೇಕೆಂದು ನಿರ್ಧರಿಸಲಾಯಿತು. ಉದಾಹರಣೆಗಳನ್ನು ಆದಷ್ಟೂ ಸಹಜಮಾರ್ಗ ಸಾಹಿತ್ಯದಿಂದ ಉಲ್ಲೇಖಿಸಬೇಕು. 'ದಿವ್ಯಲೋಕದಿಂದ ಪಿಸುಮಾತುಗಳು' ಸಂದೇಶಗಳ ಆಧಾರಿತ ಪೂರ್ಣದಿನದ ಕಾರ್ಯಕ್ರಮವು ಅಕ್ಟೋಬರ್ 23ರಂದು ನಿರ್ಧರಿತವಾಯಿತು.

## ಪ್ರಕಟನಾ ಸಂಬಂಧಿತ ಚಟುವಟಿಕೆಗಳ ವರ್ಧನೆ, ಮೈಸೂರು

ಸೆಪ್ಟೆಂಬರ್ 1 – 2ರಂದು ಮೈಸೂರಿನಲ್ಲಿ ಜಿಲ್ಲಾಮಟ್ಟದ ಸ್ವಯಂಸೇವಕರ ಕಾರ್ಯಾಗಾರವನ್ನು ಆಯೋಜಿಸಿದ್ದು ಹದಿನೈದು ಕೇಂದ್ರಗಳಿಂದ ನಲವತ್ತೊಂಬತ್ತು ಅಭ್ಯಾಸಿಗಳು ಭಾಗವಹಿಸಿದ್ದರು.ಕಾರ್ಯಕ್ರಮವು ಪರಿಣಾಮಕಾರಿ ಸ್ವಯಂಸೇವೆಗೆ ಸಾಧನೆಯೇ ಬುನಾದಿ ಎಂಬ ವಿಷಯದಿಂದ ಪ್ರಾರಂಭವಾಯಿತು. ಪ್ರಕಟನೆಗೆ ಸಂಬಂಧಿಸಿದ ಸ್ವಯಂಸೇವಕರು, ವಸ್ತುವಿಷಯ, ಸೌಕರ್ಯಗಳು, ಮಾರಾಟ ಮತ್ತು ಹಂಚಿಕೆಗಳನ್ನು ವಿಶದವಾಗಿ ಚರ್ಚಿಸಲಾಯಿತು. ಸ್ವಯಂಸೇವಕರು ಮಿಷನ್ನಿನ ಸಾಹಿತ್ಯವಾಚನ ಮಾಡಬೇಕೆಂಬ ವಿಷಯಕ್ಕೆ ಒತ್ತುನೀಡಲಾಯಿತು. ಜಿಲ್ಲಾವಾರು ಯೋಜನೆಗಳನ್ನು ಮತ್ತು ಸಲಹೆಗಳನ್ನು ಚರ್ಚಿಸಿ ಜಿಲ್ಲಾ ಆಯೋಜಕರು ಸರ್ವರಿಗೂ ಲಾಭಯುತವಾಗುವ ಯೋಜನೆಯನ್ನು ಸೂಚಿಸಿದರು.



## 'ಅವಲೋಕನ'– ಬೆಂಗಳೂರು, ಕರ್ನಾಟಕ

ಸೆಪ್ಟೆಂಬರ್ 8 ಮತ್ತು 9ರಂದು ಕನ್ನಡದಲ್ಲಿ ಉನ್ನತ ತರಬೇತಿ ಕಾರ್ಯಕ್ರಮವನ್ನು ಬನಶಂಕರಿ ಆಶ್ರಮದಲ್ಲಿ 175 ಅಭ್ಯಾಸಿಗಳೊಂದಿಗೆ ನಡೆಸಲಾಯಿತು. ಸಹಜಮಾರ್ಗದ ಸೂಕ್ಷ್ಮ ಮತ್ತು ಆಳವಾದ ತತ್ವಗಳನ್ನು ಅರ್ಥೈಸಿಕೊಂಡು ಆತ್ಮಪರೀಕ್ಷಣೆ ಮಾಡಿಕೊಳ್ಳುವಂತೆ ಅಭ್ಯಾಸಿಗಳನ್ನು ಶಕ್ತರಾಗಿಸುವುದು ಈ ಕಾರ್ಯಕ್ರಮದ ಉದ್ದೇಶವಾಗಿತ್ತು. ಸಹಜಮಾರ್ಗದ ತತ್ವಗಳು, ಸಾಧನೆಯ ಸೂಕ್ಷ್ಮ ಅಂಶಗಳು, ಸಹಜಮಾರ್ಗ–ಜೀವನದ ರೀತಿ, ನಮ್ಮ ಪ್ರಗತಿಯಲ್ಲಿ ಗುರುಗಳ ಪಾತ್ರ ಮತ್ತು ಅವರೊಡನೆ ಸಂಬಂಧ, ನಮ್ಮ ಆಧ್ಯಾತ್ಮಿಕ ಪಯಣದಲ್ಲಿ ಪ್ರೇಮದ ಹಂತಗಳು, ಮುನ್ನಡೆ, ಪರಿವರ್ತನೆ ಮತ್ತು ಆತ್ಮಪರೀಕ್ಷಣೆಗಳನ್ನು ಆಯ್ದುಕೊಳ್ಳಲಾಗಿತ್ತು.ಅಭ್ಯಾಸಿಗಳೆಲ್ಲರೂ ಭಾಗಿಯಾಗುವಂತೆ ಪ್ರಶ್ನೋತ್ತರ ಮತ್ತು ಗುರುಗಳ ಉಕ್ತಿಗಳ ವಿವರಣೆಯ ವ್ಯವಸ್ಥೆ ಮಾಡಲಾಗಿತ್ತು.

## ಕನ್ನಡ ಭಾಷಾಂತರ ತರಬೇತಿ ಕಾರ್ಯಕ್ರಮ



ಕನ್ನಡ ಭಾಷಾಂತರದ ತರಬೇತಿ ಕಾರ್ಯಕ್ರಮವನ್ನು ಎರಡು ಭಾಗಗಳಲ್ಲಿ ನಡೆಸಲಾಯಿತು.ಜೂನ್ 17ರಂದು ಮೊದಲನೆಯ ಹಾಗೂ ಆಗಸ್ಟ್ 5ರಂದು ಎರಡನೆಯ ಕಾರ್ಯಕ್ರಮ ನಡೆಯಿತು. ಆಸಕ್ತ ಅಭ್ಯಾಸಿಗಳಿಗೆ ಗುರುಗಳ ಉಪನ್ಯಾಸಗಳು, ಪುಸ್ತಕಗಳು, ವಿಡಿಯೋ ಅಡಿಬರಹಗಳನ್ನು ಆಂಗ್ಲದಿಂದ ಕನ್ನಡಕ್ಕೆ ಭಾಷಾಂತರಿಸಲು ತರಬೇತಿ ನೀಡಿ ಭಾಷಾಂತರಕಾರರ ಸಂಖ್ಯೆಯ ಹೆಚ್ಚಳ ಮಾಡುವುದು ಮತ್ತು ನಿರ್ಧರಿತ ಸಮಯದಲ್ಲಿ ಉತ್ತಮ ಗುಣಮಟ್ಟವನ್ನು ನೀಡುವುದು ಇದರ ಉದ್ದೇಶವಾಗಿತ್ತು.ಪಾಲ್ಗೊಂಡ 17 ಅಭ್ಯಾಸಿಗಳಿಗಾಗಿ ಕಾರ್ಯಕ್ರಮವನ್ನು ಸೋ. ರಾಮಶಾಸ್ತ್ರಿಯವರು ಮತ್ತು ಸೋ. ಬಿ.ಜಿ.ಸುಬ್ರಮಣ್ಯರವರು ನಡೆಸಿಕೊಟ್ಟರು.

ಮೊದಲ ಭಾಗದಲ್ಲಿ, ಭಾಗಿಗಳಿಗೆ ಸಹಜಮಾರ್ಗ ಸಾಹಿತ್ಯದಿಂದ ಒಂದು ಪರಿಚ್ಛೇದವನ್ನು ನೀಡಿ ಅದರ ಅನುವಾದವನ್ನು ನೀಡಲು ತಿಳಿಸಲಾಯಿತು. ಎರಡನೆಯ ಭಾಗದಲ್ಲಿ, ಕೆಲವೊಂದು ಅನುವಾದಗಳ ವಿಮರ್ಶೆ ಮಾಡಲಾಯಿತು. ಧನಾತ್ಮಕ ಅಂಶಗಳು ಹಾಗೂ ಅಭಾವಗಳನ್ನು ಚರ್ಚಿಸಲಾಯಿತು. ಭಾಷಾಂತರಕ್ಕಾಗಿ ಮತ್ತು ತ್ರೈಮಾಸಿಕ ಪತ್ರಿಕೆಯಲ್ಲಿ ಬರೆಯುವ ಬಗ್ಗೆ ಕೆಲವು ಸಲಹೆಗಳನ್ನು ನೀಡಲಾಯಿತು. ಕಾರ್ಯಕ್ರಮವು ವಸ್ತುನಿಷ್ಠವಾಗಿದ್ದು ಭಾಗಿಗಳೆಲ್ಲರಿಗೂ ಉಪಯುಕ್ತವಾಯಿತು.

# ಮಾರ್ಗಸೂಚಿ





## ಅಹಮದಾಬಾದ್, ಗುಜರಾತ್

ಅಹಮದಾಬಾದ್ ಆಶ್ರಮದಲ್ಲಿ 'ಜೀವನದ ನಿಜವಾದ ಗುರಿಯ ಅರಿವು' ವಿಷಯದ ಮೇಲೆ ನಡೆದ ಕಾರ್ಯಾಗಾರಕ್ಕೆ ಕೇಂದ್ರವ್ಯವಸ್ಥಾಪಕರಾದ ಸೋ. ಜಿಗ್ನೇಶ್ ಶೇಲಟ್‌ರವರು ಕಾಲೇಜ್ ವಿದ್ಯಾರ್ಥಿಗಳನ್ನು ಆಹ್ವಾನಿಸುವ ಮೂಲಕ ಹೊಸ ಜಾಗೃತಿಯ ಬುನಾದಿ ಹಾಕಿದರು. ಆಗಸ್ಟ್ 7, 2012ರಂದು ನಡೆದ ಕಾರ್ಯಾಗಾರದಲ್ಲಿ ಎಂಟು ವಿದ್ಯಾಸಂಸ್ಥೆಗಳ ಅರವತ್ತೇಳು ವಿದ್ಯಾರ್ಥಿಗಳು ಭಾಗವಹಿಸಿದ್ದರು. ಪ್ರಸ್ತುತಿಯೊಂದಿಗೆ ಪ್ರಾರಂಭಗೊಂಡ ಕಾರ್ಯಕ್ರಮದಲ್ಲಿ ನಂತರ ಐದು ವಿಷಯಗಳ ಕುರಿತು ಚರ್ಚೆಯಲ್ಲಿ ಭಾಗವಹಿಸಲು ಹೇಳಲಾಯಿತು.ಕಾರ್ಯಾಗಾರದ ಕೊನೆಯಲ್ಲಿ ಸಹಜಮಾರ್ಗ ಧ್ಯಾನ ಪದ್ಧತಿಯ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಿದಾಗ ಅನೇಕರು ಸೇರುವ ಇಚ್ಛೆ ಪ್ರಕಟಿಸಿದರು. ಕಾರ್ಯಾಗಾರದ ಪೂರ್ಣ ಸಮಯದಲ್ಲಿ ಗುರುಗಳ ಕೃಪೆ ಅನುಭವಿಸಿದರು.

## ತ್ರಿವೇಂದ್ರಂ, ಕೇರಳ

ಆಯಾ ಸಂಸ್ಥೆಯ ಮಾನವಸಂಪನ್ಮೂಲ ಅಧಿಕಾರಿಗಳ ವಿನಂತಿಯ ಮೇರೆಗೆ ಇನ್ಫೋಸಿಸ್ ಹಾಗೂ ಅರ್ನ್ಸ್ಟ್ ಅಂಡ್ ಯಂಗ್ ಸಂಸ್ಥೆಗಳಲ್ಲಿ ಮೂರು ಮುಕ್ತಸಭೆಗಳನ್ನು ಆಯೋಜಿಸಲಾಗಿತ್ತು. ಆಗಸ್ಟ್ 9 ಮತ್ತು 13ರಂದು ಇನ್ಫೋಸಿಸ್‌ನ ಟೆಕ್ನೋಪಾರ್ಕ್ ಆವರಣದಲ್ಲಿ ಹಾಗೂ ಸೆಪ್ಟೆಂಬರ್ 6ರಂದು ಅರ್ನ್ಸ್ಟ್ ಅಂಡ್ ಯಂಗ್ ಸಂಸ್ಥೆಯಲ್ಲಿ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಒಂದು ವಾರ ಮೊದಲೇ ಸಂಸ್ಥೆಗಳು ತಮ್ಮ ಉದ್ಯೋಗಿಗಳಿಗೆ ಆಹ್ವಾನಪತ್ರಗಳನ್ನು ರವಾನಿಸಿದ್ದವು. ಹೇಗೆ ಧ್ಯಾನದ ಸಹಾಯದಿಂದ ಕೆಲಸ-ಜೀವನ ಸಮತೋಲನ ಸಾಧಿಸುವುದು, ಆಂತರಿಕ ಶಾಂತಿ ಮತ್ತು ಸಾಮರಸ್ಯ ತರುವುದು, ಮತ್ತು ಧ್ಯಾನವು ವ್ಯಕ್ತಿಯನ್ನು ಹೇಗೆ ಪರಿವರ್ತಿಸುತ್ತದೆ ಎಂಬ ಚರ್ಚೆಗಳೊಂದಿಗೆ ಸಭೆಯು ಪ್ರಾರಂಭವಾಯಿತು.ನಂತರ, ಧ್ಯಾನದ ಮೂಲೋದ್ದೇಶ, ಹೃದಯದ ಮೇಲೆ ಧ್ಯಾನ, ಮಾರ್ಗದರ್ಶಕನ ಅಗತ್ಯ ಮತ್ತು ಮಿಷನ್ನಿನ ಚಟುವಟಿಕೆಗಳನ್ನು ವಿವರವಾಗಿ ತಿಳಿಸಲಾಯಿತು. ಉತ್ಸಾಹದಿಂದ ಪಾಲ್ಗೊಂಡ ಭಾಗಿಗಳು ಅನೇಕ ಪ್ರಶ್ನೆಗಳನ್ನು ಕೇಳುವ ಮೂಲಕ ತಮ್ಮ ಸಂದೇಹಗಳನ್ನು ನಿವಾರಿಸಿಕೊಂಡರು.

## ಲಮ್‌ಡಿಂಗ್, ಅಸ್ಸಾಂ

ಸೆಪ್ಟೆಂಬರ್ 1ರಂದು ಅಸ್ಸಾಂನ ಗುವಾಹಟಿಯ ಸಮೀಪದ ಚಿಕ್ಕ ಸ್ಥಳವಾದ ಲಮ್ಡಿಂಗ್‌ನಲ್ಲಿ ಮುಕ್ತಸಭೆಯನ್ನು ನಡೆಸಲಾಯಿತು. ಸೋ. ಅವಿಜಿತ್ ಡೇರವರು ಸಹಜಮಾರ್ಗವು ಸಂಪೂರ್ಣ ಅಪರಿಚಿತವಾದ ಸ್ಥಳದಲ್ಲಿ ಇಂತಹ ಕಾರ್ಯಕ್ರಮ ನಡೆಸಲು ಶ್ರಮವಹಿಸಿದರು.

ವಿದ್ಯಾರ್ಥಿಗಳು, ಶಿಕ್ಷಕರು, ವಕೀಲರು ಮತ್ತು ವ್ಯಾಪಾರಿಗಳನ್ನೊಳಗೊಂಡ 34 ಉತ್ಸಾಹೀ ಉತ್ಕಾಂಕ್ಷಿಗಳಿಗೆ ಸೋ. ಅಶೋಕ್ ಸೇನ್‌ಗುಪ್ತಾರವರು 'ಮಾನವಜೀವನದಲ್ಲಿ ಧ್ಯಾನದ ಪಾತ್ರ'ದ ಬಗ್ಗೆ ತಿಳಿಸಿದರು. ಬಂಗಾಳಿ ಭಾಷೆಯವರು ಅಧಿಕಸಂಖ್ಯೆಯಲ್ಲಿ ಇದ್ದ ಕಾರಣ ಕಾರ್ಯಕ್ರಮವು ಬಂಗಾಳಿಯಲ್ಲೇ ನಡೆಯಿತು.ವಲಯ ವ್ಯವಸ್ಥಾಪಕರಾದ ಸೋ. ಧನಿಚಂದ್ ಮತ್ತು ಸೋ. ರಾಜು ಶರ್ಮಾರವರು ಹಾಜರಿದ್ದರು. ಒಟ್ಟು ಹದಿನಾಲ್ಕು ಜನ ಅಭ್ಯಾಸಿಗಳಾದರು ಮತ್ತು ಮುಂಬರುವ ವಾರದಲ್ಲಿ ಇನ್ನೂ ಐದು ಜನರು ಸೇರುವ ನಿರೀಕ್ಷೆಯಿದೆ.

## ಪ್ರೊದತ್ತೂರು, ಆಂಧ್ರಪ್ರದೇಶ

ಅಭಿಯಂತರ ಸಂಘದ ಆಹ್ವಾನದ ಮೇರೆಗೆ ಸೆಪ್ಟೆಂಬರ್ 1ರಂದು ಕಡಪ ಜಿಲ್ಲೆಯ ಪ್ರೊದತ್ತೂರಿನ ಸಮೀಪದ ರಾಯಲ್‌ಸೀಮಾ ಥರ್ಮಲ್ ವಿದ್ಯುತ್ ಕೇಂದ್ರದ 150 ಇಂಜಿನಿಯರುಗಳಿಗಾಗಿ ಮುಕ್ತಸಭೆಯೊಂದನ್ನು ನಡೆಸಲಾಯಿತು. ಸೋ. ಟಿ.ಬಿಕ್ಷಂರವರು ಸಹಜಮಾರ್ಗ ಧ್ಯಾನ ಪದ್ಧತಿ, ಧ್ಯಾನದ ಮಹತ್ವ ಮತ್ತು ಪದ್ಧತಿಯ ಪ್ರಮುಖ ತತ್ವಗಳನ್ನು ಆಸಕ್ತಿಯುತವಾಗಿ ತಿಳಿಸಿದರು. ಭಾಗಿಗಳು ಸಂಪೂರ್ಣ ಪ್ರಭಾವಿತರಾಗಿ ಮೂವತ್ತೈದು ಜನ ಧ್ಯಾನವನ್ನು ಪ್ರಾರಂಭಿಸಿದರು.

ಅದೇ ದಿನದಂದು, ಸಮೀಪದ ಎಲ್ಲಾ ಕೇಂದ್ರಗಳ ಅಭ್ಯಾಸಿಗಳಿಗಾಗಿ ಕೂಟವೊಂದನ್ನು ಆಯೋಜಿಸಲಾಗಿತ್ತು.ಸೋ. ಎಂ.ಆರ್.ಗಂಗಾಧರ್ ಮತ್ತು ಸೋ. ಟಿ. ಬಿಕ್ಷಂರವರು ನಡೆಸಿದ ಈ ಕಾರ್ಯಕ್ರಮದಲ್ಲಿ ಪ್ರೊದತ್ತೂರು ಚಿಕ್ಕ ಕೇಂದ್ರವಾದರೂ 300 ಅಭ್ಯಾಸಿಗಳು ಪಾಲ್ಗೊಂಡರು.

## ಶ್ರೀನಗರ, ಜಮ್ಮು ಮತ್ತು ಕಾಶ್ಮೀರ

ಕೇಂದ್ರ ಮೀಸಲು ಆರಕ್ಷಕ ಪಡೆಯ ಆವರಣದಲ್ಲಿ ಅಧಿಕಾರಿಗಳ ಪತ್ನಿಯರಿಗಾಗಿ ಸೆಪ್ಟೆಂಬರ್ 1ರಂದು ಮುಕ್ತಸಭೆಯನ್ನು ಆಯೋಜಿಸಲಾಗಿತ್ತು. ಡಿಐಜಿಯಾದ ಸೋ. ಸಂದೀಪ್ ದತ್ತಾರವರ ಪತ್ನಿ ಸೋ. ರಜನಿ ದತ್ತಾರವರು ಇಪ್ಪತ್ತು ಭಾಗಿಗಳಿಗಾಗಿ ದೇಹ-ಮನಸ್ಸಿನ ಸಂಯೋಜನೆಯನ್ನು ಮಾಪನ ಮಾಡುವ ಪ್ರಯೋಗಗಳನ್ನು ಮಾಡಿಸಿದರು. ಸೋ. ಚಂದ್ರಕಾಂತಾ ಮತ್ತು ಸೋ. ರಜನಿ ದತ್ತಾರವರು 'ಸುಖೀ ಪರಿವಾರವು ನಾರಿಯ ಜವಾಬ್ದಾರಿ' ವಿಷಯದ ಮೇಲೆ ಪ್ರಸ್ತುತಿಗಳನ್ನು





ನೀಡಿದರು. ಆಂತರಿಕ ಪರಿವರ್ತನೆಯ ಪಯಣವನ್ನು ಮಾನವನ ಮನದ ಭಯ ಮತ್ತು ಆತಂಕದಿಂದ ಪ್ರಾರಂಭಿಸಿ ನಮ್ಮ ಮನದಾಳದ ಶಾಂತಿಯನ್ನು ಪ್ರತಿನಿಧಿಸುವ ಉನ್ನತ ವ್ಯಕ್ತಿತ್ವದವರೆಗೆ ಎಂದು ವಿವರಿಸಿದರು. ಅನೇಕರು ಅಭ್ಯಾಸವನ್ನು ಕೈಗೆತ್ತಿಕೊಳ್ಳಲು ಉತ್ಸುಕರಾದರು. ನಮ್ಮ ನಡತೆಯು ನಮ್ಮ ಆಂತರಿಕ ಮೌಲ್ಯಗಳನ್ನು ಬಿಂಬಿಸುತ್ತದೆ ಮತ್ತು ಮಕ್ಕಳಿಗೆ ನಾವೇ ಆದರ್ಶ ಎಂಬ ತತ್ವವನ್ನು ಮೆಚ್ಚಿದರು.

ಸೆಪ್ಟೆಂಬರ್ 2ರಂದು ಇಂತಹುದೇ ಮತ್ತೊಂದು ಕೂಟವನ್ನು ಶ್ರೀನಗರದ CRPFನ 82ನೇ ಬೆಟಾಲಿಯನ್‌ನ ಸೈನಿಕರಿಗಾಗಿ ನಡೆಸಲಾಯಿತು.

## ಮಂಗಳೂರು, ಕರ್ನಾಟಕ

ಸೆಪ್ಟೆಂಬರ್ 14ರಂದು ಶ್ರೀನಿವಾಸ ಮ್ಯಾನೇಜ್‌ಮೆಂಟ್ ವಿದ್ಯಾಲಯದ ಮೊದಲ ಮತ್ತು ಕೊನೆಯ ವರ್ಷದ ಎಂಬಿಎ ವಿದ್ಯಾರ್ಥಿಗಳಿಗಾಗಿ, ಮೊದಲ ವರ್ಷದ ಬಿಎಡ್ ವಿದ್ಯಾರ್ಥಿಗಳು ಮತ್ತು ಶಿಕ್ಷಕರನ್ನು ಸೇರಿ 200 ಜನರಿಗಾಗಿ ಮುಕ್ತಸಭೆಯನ್ನು ಏರ್ಪಡಿಸಲಾಗಿತ್ತು. ಸೋ. ಪ್ರಸಾದ್‌ಕೃಷ್ಣರವರು ಸಹಜಮಾರ್ಗದ ಬಗ್ಗೆ ಮಾತನಾಡಿದರು. ಪ್ರಾಂಶುಪಾಲರು ಹಾಗೂ ಉಪಪ್ರಾಂಶುಪಾಲರನ್ನೂ ಸೇರಿದಂತೆ ಅನೇಕರು ಧ್ಯಾನದ ಬಗ್ಗೆ ಆಸಕ್ತಿದಾಯಕ ಪ್ರಶ್ನೆಗಳನ್ನು ಕೇಳಿದರು. ಅನೇಕ ವಿದ್ಯಾರ್ಥಿಗಳು ಕಿರುಪುಸ್ತಿಕೆಯನ್ನು ಪಡೆದುದಲ್ಲದೆ ಸಾಧನೆಯನ್ನು ಪ್ರಾರಂಭಿಸಲು ಆಸಕ್ತಿ ತೋರಿದರು.

## ನೆಲ್ಲೂರು, ಆಂಧ್ರಪ್ರದೇಶ

ಸೆಪ್ಟೆಂಬರ್ 21, 2012ರಂದು ಅಂತರ್ರಾಷ್ಟ್ರೀಯ ಶಾಂತಿ ದಿನದ ಪ್ರಯುಕ್ತ 'ಮೌಲ್ಯಾಧಾರಿತ ಶಿಕ್ಷಣ' ಮತ್ತು 'ಧ್ಯಾನದ ಮಹತ್ವ'ದ ಕುರಿತು ಅರಿವು ನೀಡುವ ಕಾರ್ಯಕ್ರಮವನ್ನು ನಾರಾಯಣ ಫಾರ್ಮಸಿ ಕಾಲೇಜಿನಲ್ಲಿ ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಆಡಳಿತಾಧಿಕಾರಿಗಳಿಗಾಗಿ ನಡೆಸಲಾಯಿತು.ಮೌಲ್ಯಗಳ ಬಗ್ಗೆ ಮಾತನಾಡುತ್ತಾ ಸೋ. ಉಮಾ ಗಂಗಾಧರ್‌ರವರು ಪರಿವಾರದವರಿಗೆ ಪ್ರೇಮ ಮತ್ತು ವಾತ್ಸಲ್ಯ, ಸಮಾಜದ ಕಡೆ ಕರುಣೆ, ದಾನ ಮನಸ್ಸತ್ವ, ಸಹಾನುಭೂತಿ ತೋರುವ ಅಗತ್ಯದ ಕುರಿತು ಹೇಳಿದರು.ಸೋ. ಗಂಗಾ ಪ್ರಸಾದ್‌ರವರು ಧ್ಯಾನವು ಹೇಗೆ ಏಕಾಗ್ರತೆಯನ್ನು ಹೆಚ್ಚಿಸುತ್ತದೆ ಮತ್ತು ಮಾನವರಲ್ಲಿ ಆಧ್ಯಾತ್ಮಿಕ ಶಕ್ತಿಯನ್ನು ಪ್ರಚೋದಿಸುತ್ತದೆ ಎಂದು ವಿವರಿಸಿದರು.ಸೋ. ವೀರಭದ್ರ ರಾವ್ ಮತ್ತು ಪ್ರಾಂಶುಪಾಲರಾದ ಚಕ್ಕ ಗೋಪಿನಾಥ್‌ರವರು ಮೌಲ್ಯಗಳು ಮತ್ತು ಧ್ಯಾನದಿಂದ ಹೇಗೆ ಮನಕ್ಕೆ ಶಾಂತಿ ದೊರಕುತ್ತದೆ ಎನ್ನುವ ಬಗ್ಗೆ ಕೆಲವು ಮಾತುಗಳನ್ನು ಹೇಳುವುದರೊಂದಿಗೆ ಕಾರ್ಯಕ್ರಮವನ್ನು ಮುಕ್ತಾಯಗೊಳಿಸಿದರು.

## ಬುಚ್ಚಿರೆಡ್ಡಿಪಾಲೆಂ, ನೆಲ್ಲೂರು, ಆಂಧ್ರ ಪ್ರದೇಶ

ಸೆಪ್ಟೆಂಬರ್ 30ರಂದು ಮುಕ್ತಸಭೆ ಹಾಗೂ ಪೂರ್ಣದಿನದ ಕಾರ್ಯಕ್ರಮವನ್ನು ನಡೆಸಲಾಯಿತು. ಬುಚ್ಚಿರೆಡ್ಡಿಪಾಲೆಂ ಮತ್ತು ಸಿದ್ದಿಪುರಂನಿಂದ 96 ಅಭ್ಯಾಸಿಗಳು ಭಾಗವಹಿಸಿದ್ದರು. ಐವತ್ತೈದು ಉತ್ಕಾಂಕ್ಷಿಗಳು ಭಾಗವಹಿಸಿದ್ದ ಮುಕ್ತಸಭೆಯು ಸತ್ಸಂಗದ ನಂತರ ಪ್ರಾರಂಭವಾಗಿ ಮಧ್ಯಾಹ್ನದವರೆಗೂ ಮುಂದುವರೆಯಿತು. ಉಪನ್ಯಾಸಗಳು 'ಧರ್ಮ ಮತ್ತು ಆಧ್ಯಾತ್ಮ', 'ಆಧಾತ್ಮದ ಅಗತ್ಯ','ಗುರುವಿನ ಅಗತ್ಯ' ಮೇಲೆ ಆಧಾರಿತವಾಗಿದ್ದು, ನಂತರ ಪ್ರಶ್ನೋತ್ತರ ನಡೆಯಿತು.ಅಪರಾಹ್ನದ ಸಮಯದಲ್ಲಿ, ಸಾಧನೆ ಮಾಡುತ್ತಿರುವ ಅಭ್ಯಾಸಿಗಳನ್ನು ಹತ್ತು ನಿಯಮಗಳು ಮತ್ತು ಸಾಧನೆಯ ಮೂಲ ತತ್ವಗಳ ಬಗ್ಗೆ ಚರ್ಚೆಯಲ್ಲಿ ತೊಡಗಿಸಲಾಯಿತು.

## ಖಮ್‌ಗಾಂವ್, ಬುಲ್‌ಧಾನಾ ಜಿಲ್ಲೆ, ಮಹಾರಾಷ್ಟ್ರ

ಈ ಸ್ಥಳದಲ್ಲಿ ಸಹಜಮಾರ್ಗವು ಹಲವು ವರ್ಷಗಳ ಮೊದಲೇ ಪರಿಚಯಿಸಲ್ಪಟ್ಟಿದ್ದರೂ ಅದು ಗುಪ್ತಗಾಮಿನಿಯಾಗಿದ್ದಿತು. ಈ ಕೇಂದ್ರದ ಕೆಲವು ಅಭ್ಯಾಸಿಗಳು ಕೇಂದ್ರದ ಅಭ್ಯುದಯಕ್ಕಾಗಿ ಗುರುಗಳಲ್ಲಿ ಪ್ರಾರ್ಥಿಸಿ, ಸ್ವತಃ ಹಾಗೂ ಜೊತೆಯಾಗಿ ಕೆಲಸ ಮಾಡುವ ಪ್ರೇರಣೆ ಹೊಂದಿದರು. ಶೀಘ್ರದಲ್ಲಿ, ಅವರೆಲ್ಲೇ ಹೋದರೂ, ಜನ ಅವರನ್ನು ಧ್ಯಾನ ಹಾಗೂ ಆಧುನಿಕ ಜೀವನದಲ್ಲಿ ಅದರ ಉಪಯುಕ್ತತೆಯ ಕುರಿತು ವಿಚಾರಿಸಿ, 'ಸಹಜಮಾರ್ಗ'ದ ಬಗ್ಗೆ ಹೆಚ್ಚಿನ ಮಾಹಿತಿ ಹೊಂದಲು ಅತೀವ ಆಸಕ್ತಿ ತೋರಿದರು.ಅದಕ್ಕಾಗಿ, ಹತ್ತಿರದ ಕೇಂದ್ರದ ಪ್ರಶಿಕ್ಷಕರನ್ನು ಆಹ್ವಾನಿಸಿ, ಒಂದೂವರೆ ದಿನದಲ್ಲಿ ಎರಡು ಇಂಜಿನಿಯರಿಂಗ್ ಕಾಲೇಜುಗಳ ಉದ್ಯೋಗಿಗಳು, ಕಲಾ/ವಿಜ್ಞಾನ ಕಾಲೇಜಿನ ಉಪನ್ಯಾಸಕರು, ಹಿಂದೂಸ್ತಾನ್ ಯುನಿಲಿವರ್ ಸಂಸ್ಥೆಯ ಅಧಿಕಾರಿಗಳಿಗಾಗಿ ಮತ್ತು ಕೆಮಿಸ್ಟ್ ಹಾಲ್ ಸೇರಿದಂತೆ ಐದು ಮುಕ್ತಸಭೆಗಳನ್ನು ನಡೆಸಲಾಯಿತು. ಭಾಗಿಗಳು ಕೂಡಲೇ ಪ್ರಶಿಕ್ಷಕರನ್ನು ಭೇಟಿಮಾಡಿ ತಮ್ಮ ಪರಿಚಯಾತ್ಮಕ ಬೈಠಕುಗಳಿಗೆ ಸಮಯ ಕಾಯ್ದಿರಿಸುವುದನ್ನು ಕಂಡು ಅವರ ಉತ್ಸಾಹವನ್ನು ಲೆಕ್ಕಿಸಬಹುದಾಗಿತ್ತು.





# ಹರೂರು ಆಶ್ರಮ, ತಮಿಳುನಾಡು

## ಪ್ರಭಾಕೇಂದ್ರ





ತಮಿಳುನಾಡಿನ ಧರ್ಮಪುರಿ ಜಿಲ್ಲೆಯಲ್ಲಿ ಸ್ಥಿತ ಹರೂರು ಚಿಕ್ಕ ಪಟ್ಟಣ. ರಾಜ್ಯ ಹೆದ್ದಾರಿಯ ಮೂಲಕ ದೊಡ್ಡ ಪಟ್ಟಣಗಳಾದ ಸೇಲಂ, ಧರ್ಮಪುರಿ ಮತ್ತು ತಿರುವಣ್ಣಮಲೈಗಳಿಗೆ ಸಂಪರ್ಕ ಹೊಂದಿದೆ. ಪುರಾತನ ಮತ್ತು ಸುಂದರ ಮೊರಪ್ಪೂರು ರೈಲ್ವೆ ನಿಲ್ದಾಣವು ಹತ್ತು ಕಿ.ಮೀ. ದೂರದಲ್ಲಿದೆ.

ಸೆಪ್ಟೆಂಬರ್ 25, 1995ರಂದು ವಾಸವಿಮಹಲಿನಲ್ಲಿ ಸೋ.ಸೋಮಕುಮಾರ್‌ರವರು ಮುಕ್ತಸಭೆಯನ್ನು ನಡೆಸಿದಾಗ ಈ ಕೇಂದ್ರದ ಯೋಜನೆಯನ್ನು ಪ್ರಾರಂಭಿಸಲಾಯಿತು. ಭಾಗವಹಿಸಿದ 150 ಜನರಲ್ಲಿ ಹದಿನೈದು ಜನ ಅಂದಿನ ದಿನವೇ ಬೈಠಕುಗಳನ್ನು ತೆಗೆದುಕೊಂಡರು. ತಿರುಪ್ಪೂರು, ಶಂಕರಗಿರಿ ಮತ್ತು ಧರ್ಮಪುರಿಯ ಪ್ರಶಿಕ್ಷಕರು ಉತ್ಕಾಂಕ್ಷಿಗಳಿಗೆ ಬೈಠಕುಗಳನ್ನು ನೀಡಿದರು ಹಾಗೂ ಕೇಂದ್ರವು ಅಕ್ಟೋಬರ್ 1995ರಿಂದ ಕಾರ್ಯನಿರತವಾಯಿತು.



ಹರೂರಿನಿಂದ ಐದು ಕಿ.ಮೀ. ದೂರದಲ್ಲಿನ ತಿರುಪತ್ತೂರು ಮುಖ್ಯರಸ್ತೆಯಲ್ಲಿ ಆಶ್ರಮವು ಸ್ಥಿತವಾಗಿದೆ. ಆಶ್ರಮಕ್ಕಾಗಿ ಜಮೀನಿನ ಅನ್ವೇಷಣೆಯು 1998ರಲ್ಲಿ ಪ್ರಾರಂಭವಾಗಿ ಸೋರಿಯಾಂಪಟ್ಟಿಯಲ್ಲಿ ಐದು ಎಕರೆ ಜಮೀನಿನ ಖರೀದಿಯ ನಂತರ ಏಪ್ರಿಲ್ 19, 2000ದಂದು ನೋಂದಾಯಿಸಲಾಯಿತು.




ಗುರುಗಳು ಹರೂರು ಆಶ್ರಮಕ್ಕೆ ಭೇಟಿ ನೀಡಿ, ಧ್ಯಾನಮಂದಿರವನ್ನು ಫೆಬ್ರುವರಿ 17, 2001ರಂದು ಉದ್ಘಾಟಿಸಿ, ಎರಡು ದಿನ ವಾಸ್ತವ್ಯ ಹೂಡಿದ್ದರು. ಮೂರು ಸಾವಿರಕ್ಕೂ ಮಿಗಿಲಾದ ಅಭ್ಯಾಸಿಗಳು ಮತ್ತು ಸುಮಾರು ಐನೂರು ಉತ್ಕಾಂಕ್ಷಿಗಳು ಹಾಜರಿದ್ದರು. ಅವರು ಉಪನ್ಯಾಸದಲ್ಲಿ 'ಪ್ರಭಾಕೇಂದ್ರ'ದ ಬಗ್ಗೆ ವಿವರಿಸುತ್ತಾ, “ಆದರೆ ಇದು ನಿಜವಾದ 'ಪ್ರಭಾಕೇಂದ್ರ'ವಾಗಬೇಕು, ತ್ಯಜಿಸಿದ ಗುಡಿಯಂತೆ 'ಅಂಧಕಾರದ ಕೇಂದ್ರ'ವಲ್ಲ. ಬೆಳಕು ಯಾವಾಗ ಬರುತ್ತದೆ? ಬೆಂಕಿಕಡ್ಡಿಯನ್ನು ಗೀರಿ, ಬತ್ತಿಯನ್ನು ಹಚ್ಚಿದಾಗಲೇ ಬೆಳಕು, ಇಲ್ಲವಾದರೆ ಅಂಧಕಾರ. ಹಾಗಾಗಿ, ನಾವು ಪ್ರಭೆಯನ್ನು ಸೃಷ್ಟಿಸುವವರು, ಏಕೆಂದರೆ ಅದು ತಾನಾಗಿ ಬರುವುದಿಲ್ಲ. ಇಲ್ಲಿ ಬಂದಾಗ, ನಾವು ಸ್ವಚ್ಛ ಹೃದಯ ಹೊತ್ತು ಬರಬೇಕು, ನಾವು ಪರಿಶುದ್ಧವಾದ ಹೃದಯ ಹೊಂದಿದಾಗ ಅದು ತಾನಾಗಿಯೇ ಜ್ಯೋತಿರ್ಮಯವಾಗುತ್ತದೆ. ಅದು ಆಗ ಪ್ರಕಾಶಿಸುತ್ತದೆ.”





ಈ ಆಶ್ರಮದಲ್ಲಿ, ವಾತಾವರಣಕ್ಕೆ ಪ್ರಶಾಂತತೆ ತಂದು ಕೊಡುವಂತೆ ಬಹಳಷ್ಟು ಮರಗಳಿಂದ ಕೂಡಿದ ಸುಂದರವಾದ ತೋಟವಿದೆ. ಧ್ಯಾನ ಮಂದಿರವು 1000 ಚ.ಅಡಿಗಳಿದ್ದು ಎಸಿ ಶೀಟಿನ ಛಾವಣಿಯಿದೆ. ಇದುಮೂರು ತಿಂಗಳುಗಳ ನಿರ್ಮಾಣ ಕಾರ್ಯದ ನಂತರ ಡಿಸೆಂಬರ 2000ರಲ್ಲಿ ಪೂರ್ಣಗೊಂಡಿತು. ಇದಲ್ಲದೆ 864 ಚ.ಅಡಿಗಳ ವಿಶ್ರಾಂತಿ ಶಾಲೆಯಿದ್ದು ಹೆಚ್ಚಿನ ಸಂಖ್ಯೆಯಲ್ಲಿ ಸ್ನಾನದ ಮನೆ ಮತ್ತು ಶೌಚಾಲಯಗಳಿವೆ. ಗುರುಗಳ ಕುಟೀರವಲ್ಲದೆ ವಿಶಾಲ ಅಡಿಗೆ ಮತ್ತು ತಂಪಾದ ಊಟದ ಮನೆ ಇದ್ದು ಹುಲ್ಲಿನ ಮಾಡಿನಿಂದಾಗಿ ಚಿತ್ರದಲ್ಲಿರುವಂತೆ ಕಾಣುತ್ತದೆ.

ಗುರುಗಳು 2007ರ ಆಗಸ್ಟ್ 16ರಂದು ಎರಡನೇ ಬಾರಿ ಆಶ್ರಮಕ್ಕೆ ಭೇಟಿ ನೀಡಿ ಸತ್ಸಂಗ ನಡೆಸಿದ್ದರು. ಗುರುಗಳು ಹರೂರಿನಲ್ಲಿ ಶಾಶ್ವತ ಧ್ಯಾನ ಮಂದಿರ ನಿರ್ಮಿಸಲು ಅನುಮತಿಸಿದ್ದಾರೆ.

ಆಶ್ರಮಕ್ಕೆ ಒತ್ತಿಕೊಂಡಂತೆ ಶ್ರೀ ಚಾರೀಜಿ ನಗರ ಹೌಸಿಂಗ್ ಕಾಲೊನಿ ಇದ್ದು ಇದು 7 ಎಕರೆಗಳಷ್ಟಿದೆ. ಒಟ್ಟು 90 ನಿವೇಶನಗಳು ವಸತಿಗಾಗಿ,ಗುರುಗಳಿಂದ ಅಭ್ಯಾಸಿಗಳಿಗೆ ವಹಿಸಲ್ಪಟ್ಟಿದೆ. 30000 ಸಾವಿರ ಲೀಟರ್‌ಗಳಷ್ಟು ಸಾಮರ್ಥ್ಯವುಳ್ಳ ನೀರು ಸರಬರಾಜು ತೊಟ್ಟಿಯಿದ್ದು ಬಡಾವಣೆಗೆ ನೀರೊದಗಿಸುತ್ತದೆ.

ಗುರುಗಳ ಭೇಟಿಯ ನಂತರ ಉತಾನಗರ್ರೈ, ಸಿಂಗಾರಪೆಟ್ಟೈ, ಕಾಂಬಿಯನಲ್ಲೂರು, ಬೊಮ್ಮಿಡಿ, ಪಾಪ್ಪಿರೆಡ್ಡಿಪಟ್ಟಿ, ಮೊರಾಪುರ್ ಮತ್ತು ಕೊಟ್ಟಪತ್ತಿ ಉಪಕೇಂದ್ರಗಳ ಅಸ್ತಿತ್ವಕ್ಕೆ ಬಂದವು. ಒಟ್ಟಾರೆ 400 ಜನ ಅಭ್ಯಾಸಿಗಳು ಹರೂರು ಮತ್ತು ಅಲ್ಲಿನ ಉಪಕೇಂದ್ರಗಳಲ್ಲಿ ಸಹಜಮಾರ್ಗದ ಅಭ್ಯಾಸ ಮಾಡುತ್ತಿದ್ದಾರೆ. ಸತ್ಸಂಗಗಳ ಜತೆಗೆ, ಗುರುಗಳ ಜನ್ಮದಿನ, ಪ್ರಶಿಕ್ಷಕರ ಸಭೆ ಮತ್ತು ಇತರ ತರಬೇತಿ ಕಾರ್ಯಕ್ರಮಗಳು ಇಲ್ಲಿ ನಡೆಯುತ್ತಿವೆ.

## ಪ್ರಕಟಣೆಗಳು

### ಹೊಸ ನೇಮಕಾತಿಗಳು

**ಡಾ.ಸತ್ಯ ಎನ್.ಮಂಡಲ್**
ವಲಯ ವ್ಯವಸ್ಥಾಪಕರು ದೆಹಲಿ (ಎನ್.ಸಿ.ಆರ್)ವಲಯ

**ಉಪೇಂದ್ರ ಪಾಲ್ ಧವನ್ , ಐ.ಆರ್.ಎಸ್(ನಿವೃತ್ತ)**
ನಿರ್ದೇಶಕರು, ಕ್ರೆಸ್ಟ್, ಖರಗಪುರ


**ಸೊ.ರೂಪಾಲಿ ಗರ್ಗ್**
ಸಹ ನಿರ್ದೇಶಕರು, ಕ್ರೆಸ್ಟ್, ಖರಗಪುರ

**ಸಿ.ಎಸ್.ರಾಮಚಂದ್ರ ಮೂರ್ತಿ**
ನಿರ್ವಹಣಾ ವ್ಯವಸ್ಥಾಪಕರು, ಕ್ರೆಸ್ಟ್, ಖರಗಪುರ

**ಜಗದೀಶ್ ಸರನ್ ಗುಪ್ತಾ**
ವ್ಯವಸ್ಥಾಪಕರು, ಲಖ್ನೋ ಆಶ್ರಮ

**ಉಲ್ಲಾಸ ರಾವ್ ಕುಂಬ್ಳೆ**
ಸಿಐಸಿ, ಹೈದರಾಬಾದ್ ಕೇಂದ್ರ

**ಶ್ಯಾಮ್ ಜೀ ಮೆಹ್ರೊತ್ರಾ**
ಸಿಐಸಿ, ಲಖ್ನೋ ಆಶ್ರಮ




### ದಾಖಲಾತಿ ಕೇಂದ್ರ, ಕೇಂದ್ರ ಕಚೇರಿ, ಚೆನ್ನೈ

ನಮ್ಮ ಮಿಷನ್ನಿನ ಇತಿಹಾಸವನ್ನು ಕಾಯ್ದಿರಿಸಲು ಮಣಪ್ಪಾಕ್ಕಂ ಆಶ್ರಮದ ದಾಖಲಾತಿ ತಂಡವು ಮಿಷನ್ನಿನ, ಐತಿಹಾಸಿಕ ಮಹತ್ವವನ್ನುಳ್ಳ ವಸ್ತುಗಳನ್ನು ಸಂಗ್ರಹಿಸುತ್ತಿದೆ. ನಿಮ್ಮ ಬಳಿ ಅಂತಹುದ್ದೇನಾದರೂ ವಸ್ತುಗಳಿದ್ದಲ್ಲಿ, (ಉದಾ: ಛಾಯಾಚಿತ್ರಗಳು, ಯಾವುದೇ ಮಾಧ್ಯಮದಲ್ಲಿರುವು ದೃಶ್ಯ-ಶ್ರವಣ ತುಣುಕುಗಳು, ಹಳೆಯ ಪುಸ್ತಕಗಳು, ನಿಯತಕಾಲಿಕಗಳು ಅಥವಾ ಗುರುಗಳು ಉಪಯೋಗಿಸುತ್ತಿದ್ದ ಯಾವುದೇ ವಸ್ತುಗಳು) ದಯವಿಟ್ಟು ಅದನ್ನು ಸಂಗ್ರಹಾಲಯಕ್ಕೆ ನೀಡುವ ಮನಸ್ಸು ಮಾಡಬೇಕೆಂದು ವಿನಂತಿ. ತಂಡವನ್ನು whq.archives@srcm.orgಯಲ್ಲಿ ಸಂಪರ್ಕಿಸಬಹುದು.

**To download or subscribe to this newsletter, please visit http://www.sahajmarg.org/newsletter/india For feedback, suggestions and news articles please send email to in.newsletter@srcm.org**

© 2011 Shri Ram Chandra Mission ("SRCM"). All rights reserved. "Shri Ram Chandra Mission", "Sahaj Marg", "SRCM", "Constant Remembrance" and the Mission's Emblem are registered Trademarks of Shri Ram Chandra Mission.This Newsletter is intended exclusively for the members of SRCM. The views expressed in the various articles are provided by various volunteers and are not necessarily those of SRCM.